ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 11 ಮಾರ್ಚ್ 16, 1986 ಬೆಲೆ 60 ಪೈಸೆ

ಒಳಗೇನಿದೆ....?

* ವಾರಲಿ ಆದಿವಾಸಿಗಳ ಮಹಾನ್ ಹೋರಾಟ ಪುಟ-4
* ತೆಲಂಗಾಣ ಹೋರಾಟ ಮತ್ತು ಪಕ್ಷದೊಳಗಿನ ಭಿನ್ನಾಭಿಪ್ರಾಯಗಳು ಪುಟ-5
* ಪ್ರಾಂತ ರೈತ ಸಂಘದ 8ನೇ ರಾಜ್ಯ ಸಮ್ಮೇಳನದ ಚಿತ್ರಗಳು
* ಅವಗಣನೆಗೆ ಗುರಿಯಾದ ನಿರಂಜನರ ಸಾಹಿತ್ಯ ಪುಟ-2
* ಅಂತರ್ರಾಷ್ಟ್ರೀಯ ಪುಟ-7

ವಿಧಾನ ಸಭೆಯಲ್ಲಿ ಕಾ॥ ಟಿ. ಎಸ್. ಮಣಿ

'ಕಾರ್ಮಿಕರ ಹಿತಾಸಕ್ತಿಗಳನ್ನು ಸರಕಾರ ಕಡೆಗಣಿಸುತ್ತಿದೆ'

ವಿಧಾನ ಸಭೆಯಲ್ಲಿ ಮಾರ್ಚ್ 10 ರಂದು ಕಾರ್ಮಿಕ ಇಲಾಖೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಾ ಸಿ.ಪಿ.ಐ.(ಎಂ) ಸದಸ್ಯ ಕಾಂ.ಟಿ. ಎಸ್ ಮಣಿಯವರು ಕರ್ನಾಟಕ ರಾಜ್ಯ ಸರಕಾರದ ಕಾರ್ಮಿಕ ಧೋರಣೆ ಕಾರ್ಮಿಕ ವಿರೋಧಿಯೆಂದು ಆಪಾದಿಸಿದರು ಇದಕ್ಕೆ ಅವರು ಸರಕಾರದ 1985-86ರ ಆರ್ಥಿಕ ಸಮೀಕ್ಷೆಯಿಂದಲೇ ಅಂಕೆ ಸಂಖ್ಯೆಗಳ ಪುರಾವೆ ಒದಗಿಸಿದರು. 1984-85 ರಲ್ಲಿ 2,74,400 ಕೆಲಸದ ದಿನಗಳು ಮುಷ್ಕರಗಳಿಂದಾಗಿ ನಷ್ಟವಾಗಿದ್ದರೆ 1985-86 ರಲ್ಲಿ ಇದು ಕೇವಲ 1,43,600 ಆಗಿತ್ತು. ತದ್ವಿರುದ್ಧವಾಗಿ, ಲಾಕೌಟುಗಳಿಂದ ಆದ ಕೆಲಸದ ದಿನಗಳ ನಷ್ಟ 1983-84ರಲ್ಲಿ ಕೇವಲ 37 ಸಾವಿರ ಇದ್ದುದು 198-485 ರಲ್ಲಿ ಒಮ್ಮೆಲೇ 2,13,500 ಕ್ಕೆ ಹಾರಿತು. 1985-86ರ ಮೊದಲ ಎಂಟು ತಿಂಗಳಲ್ಲೇ ಇದು 217100 ನ್ನು ತಲುಪಿದೆ. ಸರಕಾರ ಲಾಕೌಟುಗಳು ಲೇಆಫ್‌ಗಳಾದಾಗ ಏನೂ ಮಾಡುವುದಿಲ್ಲ ಸರಕಾರಿ ಅಧಿಕಾರಿಗಳು, ಆಡಳಿತ ವರ್ಗದ ಪಕ್ಷ ವಹಿಸುತ್ತಾರೆ, ಕಾರ್ಮಿಕರ ಹಿತಾಸಕ್ತಿಗಳನ್ನು ಕಡೆಗಣಿಸಲಾಗುತ್ತದೆ ಎಂಬುದನ್ನೇ ಈ ಅಂಕೆ ಸಂಖ್ಯೆಗಳು ತೋರಿಸುವುದಲ್ಲವೇ ಎಂದು ಕಾಂ ಮಣಿ ಪ್ರಶ್ನಿಸಿದರು. ನಾಲ್ಕು ತಿಂಗಳಿಂದ 250 ಕಾರ್ಮಿಕರು ಹಾಗೂ ಅವರ ಕುಟುಂಬಗಳನ್ನು ಬೀದಿಪಾಲು ಮಾಡಿರುವ ಹೋಟೆಲ್ ಈಸ್ಟ್-ವೆಸ್ಟ್‌ನ ಲಾಕೌಟನ್ನು ಉದಾಹರಿಸುತ್ತಾ ಅವರು ಕಾರ್ಮಿಕರು ಉಪವಾಸವಿರುವಾಗ ಸರಕಾರ ವಿನೋದವನ್ನು ನೋಡುತ್ತಿದೆಯಲ್ಲ! ಎಂದು ಹೇಳಿ, ಹೋಟೆಲ್ ಈಸ್ಟ್—ವೆಸ್ಟ್‌ನ್ನು ಕೆ. ಎಸ್. ಟಿ. ಡಿ. ಸಿ ವಹಿಸಿಕೊಳ್ಳಬೇಕೆಂದು ಕಾರ್ಮಿಕರ ಬೇಡಿಕೆಯನ್ನು ಈಡೇರಿಸಬೇಕೆಂದು ಒತ್ತಾಯಿಸಿದರು.

ಕನಿಷ್ಟ ಕೂಲಿ

ಮುಂದುವರಿದು ಕಾಂ. ಮಣಿ ಸರಕಾರದ ಕಾರ್ಮಿಕ ವಿರೋಧಿ ನೀತಿಯ ಒಂದು ಅತ್ಯಂತ ಗಂಭೀರ ಉದಾಹರಣೆಯಾದ ಒಂದು ಕೋಟಿಗೂ ಹೆಚ್ಚು ಅಂದರೆ ರಾಜ್ಯದ ಜನಸಂಖ್ಯೆಯ ಕಾಲು ಭಾಗಕ್ಕೂ ಹೆಚ್ಚಿರುವ ಅಸಂಘಟಿತ ಕೈಗಾರಿಕೆಗಳ ಕಾರ್ಮಿಕರ ಕನಿಷ್ಟ ಕೂಲಿಯ ಪ್ರಶ್ನೆಯನ್ನೆತ್ತಿದರು. ಈ ಅಸಂಘಟಿತ ಕಾರ್ಮಿಕರಿಗೆ ಸಾಮೂಹಿಕ ಚೌಕಾಶಿಯ ಶಕ್ತಿಯಿಲ್ಲದಿದ್ದುದರಿಂದ ಕೃಷಿ ಕೂಲಿಗಳು ಸೇರಿದಂತೆ ಇಂತಹ ಎಲ್ಲಾ ಕಾರ್ಮಿಕರಿಗೆ ಜೀವನ ನಡೆಸಲು ಅನುಕೂಲವಾಗುವ ಕನಿಷ್ಟ ವೇತನವನ್ನು ಸರಕಾರವೆ ನಿಗದಿಮಾಡಬೇಕೆಂದು ಭಾರತದ ಸಂವಿಧಾನದ ನಿರ್ದೇಶಕ ಸೂತ್ರಗಳಲ್ಲಿ ಹೇಳಿರುವುದನ್ನು ಹಾಗೂ ಆರೋಗ್ಯಕರ ಆರ್ಥಿಕ ಬೆಳವಣಿಗೆಗೆ ಇಂತಹ ಕಾರ್ಮಿಕರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬೇಕೆಂದು ಯೋಜನಾ ಆಯೋಗ ಹೇಳಿರುವುದನ್ನು ಜ್ಞಾಪಿಸಿಕೊಟ್ಟ ಕಾಂ. ಮಣಿಯವರು ಕರ್ನಾಟಕ ಸರಕಾರ ನಿಗದಿಪಡಿಸಿದ ಕೂಲಿ ತುಂಬಾ ಕಮ್ಮಿಯಾಗಿದ್ದು, ಅದನ್ನು ಕೂಡ ಸರಿಯಾಗಿ ಪಾಲಿಸುವಂತೆ ಮಾಡುವ ವ್ಯವಸ್ಥೆಯಿಲ್ಲವೆಂದೂ, ಮಾಲಿಕರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತರುತ್ತಾರೆಂದೂ ನುಡಿದರು. "ಈ ಜನಗಳ ಕೊಳ್ಳುವ ಶಕ್ತಿ ತುಂಬಾ ಕಮ್ಮಿ. ಇದು ನಮ್ಮ ರಾಜ್ಯ ಹಾಗೂ ಅದರ ಆರ್ಥಿಕ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ಕೈಗಾರಿಕಾ ಉತ್ಪನ್ನಗಳಿಗೆ ಬೇಡಿಕೆಯೇ ಇರುವುದಿಲ್ಲ ಅಥವಾ ಅತಿ ಕಮ್ಮಿ ಬೇಡಿಕೆಯಿರುತ್ತದಷ್ಟೆ" ಎಂದು ಅವರು ಹೇಳಿದರು.

ಅಷ್ಟರಿಂದ ಸರಕಾರ ಕಾರ್ಮಿಕ ಸಂಘಗಳು ಸಲ್ಲಿಸಿರುವ ಬೇಡಿಕೆಗಳ ಪ್ರಕಾರ ಕನಿಷ್ಟ ಕೂಲಿ ನಿಗದಿ ಪಡಿಸಬೇಕು ಹಾಗೂ ಕನಿಷ್ಟ ಕೂಲಿ ಸಲಹಾ ಸಮಿತಿಯಲ್ಲಿ ಸರಕಾರಿ ಪ್ರತಿನಿಧಿಗಳು ಕಾರ್ಮಿಕ ಪ್ರತಿನಿಧಿಗಳ ನ್ಯಾಯೋಚಿತ ಬೇಡಿಕೆಗಳನ್ನು ವಿರೋಧಿಸುವುದನ್ನು, ಅಥವಾ ಬೆಂಬಲಿಸದಿರುವುದನ್ನು, ಅವರು ಕಾರ್ಮಿಕ ವಿರೋಧಿ ಮಾಲೀಕರ ಪರ ನಿಲುವು ತಳೆಯುವುದನ್ನು ಸರಿಪಡಿಸಬೇಕೆಂದು ಕಾಂ ಮಣಿ ಒತ್ತಾಯಿಸಿದರು.

ಕನಿಷ್ಟ ಕೂಲಿಯ ಬಗ್ಗೆ ಸಿಐಟಿಯುನ ಪ್ರಯತ್ನಗಳನ್ನು ಪ್ರಸ್ತಾಪಿಸುತ್ತಾ ಸರಕಾರಕ್ಕೆ ಹಲವು ಸಲ ಮನವಿಗಳನ್ನು ಸಲ್ಲಿಸಿ ಹೋರಾಟಗಳನ್ನು ನಡೆಸಿತು. ಕಳೆದ ವರ್ಷದ ಆಗಸ್ಟ್ 9 ರಂದು ಸರಕಾರಿ ಕಛೇರಿಗಳ 'ಪಿಕೆಟಿಂಗ್' ನಡೆಸಿ ಮೂವತ್ತು ಸಾವಿರ ಬಂಧನಗಳಾಗಿ ಐದು ಲಕ್ಷ ಕಾರ್ಮಿಕರು ಮುಷ್ಕರ ಹೂಡಿದರು, ಈ ತಿಂಗಳ ಮೂರರಂದು ರಾಜ್ಯದಾದ್ಯಂತ ಹತ್ತು ಸಾವಿರಕ್ಕೂ ಹೆಚ್ಚು ಕಾರ್ಮಿಕರು ವಿಧಾನ ಸೌಧಕ್ಕೆ ಬಂದು ಕಾರ್ಮಿಕ ಮಂತ್ರಿಗಳಿಗೆ ಒಂದು ಮನವಿ ಅರ್ಪಿಸಿದರು ಎಂದು ತಿಳಿಸಿದ ಕಾ ಟಿ ಎಸ್. ಮಣಿಯವರು "ನಾವು ಅವರ ಬೇಡಿಕೆಗಳನ್ನು ಈ ಸದನದಲ್ಲಿ ಎತ್ತುತ್ತಿದ್ದೇವೆ" ಎಂದು ಹೇಳಿ ಅಸಂಘಟಿತ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಸದನದ ಮುಂದಿಟ್ಟು ಅವನ್ನು ಸರಕಾರ ಈಡೇರಿಸಬೇಕೆಂದು ಒತ್ತಾಯಿಸಿದರು ತಾತ್ಕಾಲಿಕವಾಗಲಿ, ಖಾಯಂ ನೌಕರರಾಗಲಿ ಎಲ್ಲರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕೆಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ತೀರ್ಪು ನೀಡಿದ್ದರೂ ಸರಕಾರ ಸಾರ್ವಜನಿಕ ಕಾಮಗಾರಿ, ನೀರಾವರಿ ಹಾಗೂ ಇತರ ಇಲಾಖೆಗಳಲ್ಲಿ ದಿನಗೂಲಿಯ 85 ಸಾವಿರ ಕಾರ್ಮಿಕರಿಗೆ ಹಿಂದಿನ ಸರಕಾರದಡಿಯಲ್ಲಿ ಸಿಗುತ್ತಿದ್ದ ಶನಿವಾರ ಹಾಗೂ ಭಾನುವಾರದ ಕೂಲಿಯನ್ನು ನಿರಾಕರಿಸುತ್ತಿದೆ ಎಂದ ಮಣಿಯವರು ಇದನ್ನು ಸರಿಪಡಿಸಬೇಕೆಂದರು.

ಇಲಾಖೆಯ ಕುಂದು ಕೊರತೆಗಳು

ಕಾರ್ಮಿಕ ಇಲಾಖೆಯ ಇತರ ಕುಂದುಕೊರತೆಗಳ ಬಗ್ಗೆ ಮಾತನಾಡುತ್ತಾ ಕಾಂ. ಮಣಿಯವರು "ಕಾರ್ಮಿಕ ಇಲಾಖೆಯು ಕಾರ್ಯನಿರ್ವಹಣೆಯಲ್ಲಿ ಜಡತ್ವವಿದೆ. ಹಲವಾರು ಅಧಿಕಾರಿಗಳು ಹಾಗೂ ಇನ್ಸ್‌ಪೆಕ್ಟರುಗಳು ಭ್ರಷ್ಟರು. ಅವರು ಕಾರ್ಮಿಕರ ಹಿತಾಸಕ್ತಿಗಳ ವಿರುದ್ಧ ಮಾಲೀಕರ ಕಾನೂನು ಸಲಹೆಗಾರರಾಗಿ ವರ್ತಿಸುತ್ತಿದ್ದಾರೆ. ಕಾರ್ಮಿಕರ ದೂರುಗಳನ್ನು, ವಿವಾದಗಳನ್ನ ಪರಿಹರಿಸುವಲ್ಲಿ ವಿಪರೀತ ವಿಳಂಬವಾಗುತ್ತಿದೆ. ಮಾಲೀಕರುಗಳು ಪಂಚಾಯ್ತಿ ಸಭೆಗೆ ಆಜರಾಗದೆ ಕಾರ್ಮಿಕರುಗಳಿಗೆ ಕಿರುಕುಳ ಕೊಡಲು ಉಪವಾಸ ಕೆಡವಲು ಪ್ರಯತ್ನಿಸುತ್ತಾರೆ. ಮಾಲೀಕರುಗಳು ಪಂಚಾಯ್ತಿ ಸಭೆಗಳಲ್ಲಿ ಹಾಜರಿರುವುದು ಅನಿವಾರ್ಯವಾಗುವಂತೆ ಮಾಡುವ ಅಧಿಕಾರಗಳನ್ನು ಕೊಡುವಂತೆ ಕರ್ನಾಟಕ ಕೈಗಾರಿಕಾ ವಿವಾದ ನಿಯಮಗಳನ್ನು ತಿದ್ದುಪಡಿಗೊಳಿಸಬೇಕು" ಎಂದು ಕಾಂ. ಮಣಿ ಹೇಳಿದರು, ವಜಾಗೊಳಿಸಲ್ಪಟ್ಟ ಕಾರ್ಮಿಕರಿಗೆ ಅವರ ವಿವಾದ ಪರಿಹಾರವಾಗುವವರೆಗೆ ಜೀವನ ವೆಚ್ಚ ಭತ್ಯೆ ಕೊಡಲಾಗುವಂತೆ ಸ್ಥಾಯೀ ಆಜ್ಞೆಗಳ ನಿಯಮಗಳನ್ನು ತಿದ್ದುಪಡಿ ಗೊಳಿಸಬೇಕೆಂದೂ, ಹಾಸನದ ಮುಗಾಳಿ ಎಸ್ಟೇಟ್ ಹಾಗೂ ಇತರ ಹಲವೆಡೆ ಆಗಿರುವಂತೆ ಮಾಲಕರ ಪರವಾಗಿ ಪೋಲೀಸರ ಹಸ್ತಕ್ಷೇಪ, ಕಾರ್ಮಿಕರ ಮೇಲೆ

[8ನೇ ಪುಟ ನೋಡಿ]

ಹರಿಹರದಲ್ಲಿ ಎಐಟಿಯುಸಿಯ ಗೂಂಡಾಗಿರಿ

ಕಾರ್ಮಿಕ ಕೇಂದ್ರವಾದ ಹರಿಹರ ಮತ್ತು ಕುಮಾರ ಪಟ್ಟಣದಲ್ಲಿ ಇತ್ತೀಚೆಗೆ ನಡೆದ ದೊಡ್ಡ ಎರಡು ಕಾರ್ಮಿಕ ಸಂಘಗಳ ಚುನಾವಣೆ ಟ್ರೇಡ್‌ಯೂನಿಯನ್ ಚುನಾವಣೆನಡೆಸುವುದರಲ್ಲಿ ಪ್ರಜಾಪ್ರಭುತ್ವ ಬೆಳವಣಿಗೆಯ ವಿಜಯವಾಗಿದೆಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ವಿಜೆಕೆ ನಾಯರ್ ಅವರು ಪತ್ರಿಕಾ ಹೇಳಿಕೆ ನೀಡಿದ್ದಾರೆ. ಗ್ವಾಲಿಯರ್ ರಯಾನ್ ಗ್ರೇಸಿಲಿಕ್ ಡಿವಿಜನ್ ಮತ್ತು ಮೈಸೂರು ಕಿರ್ಲೋಸ್ಕರ್ ಕಾರ್ಖಾನೆಗಳ ಕಾರ್ಮಿಕರು ನಡೆಸಿದ ತಮ್ಮ ಯೂನಿಯನ್ ಚುನಾವಣೆಗಳು ಪ್ರಜಾಪ್ರಭುತ್ವ ಶಕ್ತಿಗಳನ್ನು ಮತ್ತಷ್ಟು ಬಲಪಡಿಸಿವೆ ಸ್ಥಳೀಯ ಎಐಟಿಯುಸಿ ಮುಖಂಡತ್ವದ ಪ್ರತಿಗಾಮಿ ಹಾಗೂ ಗೂಂಡಾಗಿರಿ ನೀತಿಗೆ ಅಪಾರ ಕೋಲುಂಟು ಮಾಡಿವೆ.

ಎಐಟಿಯುಸಿ ಮತ್ತು ಸಿಐಟಿಯು ಒಂದಾಗಬೇಕೆಂದು ಅಖಿಲ ಭಾರತ ಎಐಟಿಯುಸಿ ಮುಖಂಡರು ಮನವಿ ಮಾಡಿಕೊಳ್ಳುತ್ತಿದ್ದಾರೆ. ಅವರ ಆ ಹೇಳಿಕೆ ಸತ್ಯಕ್ಕೆ ಎಷ್ಟು ದೂರವಾಗಿದೆಂಬ ಸಂಗತಿ ಹರಿಹರದ ಎಐಟಿಯುಸಿ ಮುಖಂಡರ ಗೂಂಡಾಗಿರಿ ಹಾಗೂ ಹಿಂಸಾಚಾರ ಸ್ಪಷ್ಟವಾಗಿ ತೋರಿಸಿಕೊಡುತ್ತದೆ.

ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾವಣೆ ನಡೆಯಬೇಕು. ಯಾವ ಒತ್ತಡವಿಲ್ಲದೆ ಕೆಲಸಗಾರರು ಮತದಾನ ಮಾಡಬೇಕು ಆ ನಿರ್ಣಯವನ್ನು ಎಲ್ಲರೂ ಒಪ್ಪಿಕೊಳ್ಳಬೇಕು ಇದು ಸಿಐಟಿಯು ನಿಲುವು, ಯೂನಿಯನಿನ ಪ್ರಾತಿನಿಧ್ಯದ ಕುರಿತು ಗುಪ್ತ ಮತದಾನ ನಡೆಯಬೇಕೆಂದೂ ಸಿಐಟಿಯು ಒತ್ತಾಯಿಸುತ್ತದೆ.

ಬಹಿರಂಗವಾಗಿ ಎಐಟಿಯುಸಿ ಮುಖಂಡತ್ವ ಈ ನಿಲುವನ್ನು ಒಪ್ಪಿಕೊಂಡರು ಕೂಡ ಸ್ಥಳೀಯವಾಗಿ ಚುನಾವಣೆಯಲ್ಲಿ ಸೋತಾಗ ಸಿಐಟಿಯು ಕಾರ್ಯಕರ್ತರ ಮೇಲೆ ಗೂಂಡಾಗಿರಿ ನಡೆಸುವುದು ಅತ್ಯಂತ ಖಂಡನೀಯ. ಹರಿಹರದಲ್ಲಿಯ ಎಐಟಿಯುಸಿ ಮುಖಂಡರು ಸಿಐಟಿಯು ಬೆಂಬಲಿಗರ ಮೇಲೆ ಅತ್ಯಾಚಾರ ನಡೆಸಿದ ಫಲವಾಗಿ ನಾಲ್ಕು ಜನರಿಗೆ ಬಹಳ ಪೆಟ್ಟು ಬಿದ್ದಿದೆ. ಆದರೂ ಪೊಲೀಸರು ಏನೂ ಕ್ರಮ ತೆಗೆದುಕೊಳ್ಳಲಿಲ್ಲ ಆಗ ತಮ್ಮ ರಕ್ಷಣೆಗಾಗಿ ತಾವೇ ವ್ಯವಸ್ಥೆ ಮಾಡಿಕೊಳ್ಳಬೇಕಾಯಿತು. ಅನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಇನ್ನೇ ರೀತಿ ಗೂಂಡಾಗಿರಿ ಮುಂದುವರಿದರೆ ಪ್ರತೀಕಾರ ಮಾಡಬೇಕಾದೀತೆಂಬ ಎಚ್ಚರಿಕೆ ನೀಡಲಾಯಿತು. ಗೂಂಡಾಗಿರಿಗೆ ಸಿಐಟಿಯು ಹೆದರುವುದಿಲ್ಲವೆಂದು ಸ್ಪಷ್ಟ ಹೇಳಬಯಸುತ್ತೇವೆ.

ಏಪ್ರಿಲ್ 11, 12, 13, ರಂದು ರಾಯಚೂರಿನಲ್ಲಿ ನಡೆಯಲಿರುವ

ಪ್ರಾಂತ ರೈತ ಸಂಘದ 8ನೇ ರಾಜ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಿ

ಕಳೆದ ಏಳನೇ ರಾಜ್ಯ ಸಮ್ಮೇಳನ, ಹೋರಾಟ, ಚಳುವಳಿಯ ಪರಂಪರೆಯನ್ನು ಹೊಂದಿರುವ ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ 1981ರಲ್ಲಿ ನಡೆಯಿತು

ಏಳನೇ ರಾಜ್ಯ ಸಮ್ಮೇಳನದೊಂದಿಗೆ ಸಂಘಟನೆ ಬೆಳೆದು ಬಂದಿರುವ ರಾಯಚೂರು ಜಿಲ್ಲೆಯಲ್ಲಿ ಇಂದು ಎಂಟನೇ ರಾಜ್ಯ ಸಮ್ಮೇಳನ 1986 ಏಪ್ರಿಲ್ 11, 12, 13 ರಂದು ನಡೆಯಲಿದೆ.

ಅಖಿಲ ಭಾರತ ಕಿಸಾನ್ ಸಭಾಕ್ಕೆ 1986 ರಲ್ಲಿ ಐವತ್ತು ವರುಷ ತುಂಬುತ್ತಿದೆ. ಇಡೀ ವರುಷವನ್ನು ಸುವರ್ಣ ಮಹೋತ್ಸವ ವರ್ಷವೆಂದು ಆಚರಿಸಲು ಕರೆ ಕೊಟ್ಟಿದೆ. ರಾಷ್ಟ್ರದ ಕನಿಷ್ಠ ಐವತ್ತು ಸಾವಿರ ಗ್ರಾಮಗಳಿಗೆ ಹಾಗೂ ರಾಷ್ಟ್ರದ ಎಲ್ಲಾ ಹೋಬಳಿ ಕೇಂದ್ರಗಳಿಗೆ ಕಿಸಾನ್ ಸಭಾದ ಸಂದೇಶವನ್ನು ಪ್ರಚಾರಗೊಳಿಸಲು ಸಿ. ಕೆ. ಸಿ. ಕರೆ ಕೊಟ್ಟಿದೆ. ರಾಷ್ಟ್ರದ ವಿವಿಧ ಪ್ರದೇಶದಲ್ಲಿ ನಡೆದಿರುವ ಹೋರಾಟ, ಚಳುವಳಿಯ ಹೊತ್ತಿಗೆಗಳನ್ನು ತರಲು ಹಾಗೂ ಕಿಸಾನ್ ಸಭಾಕ್ಕಾಗಿ ದುಡಿದ ಅನುಭವೀ ಸಂಗಾತಿಗಳಿಗೆ ಸನ್ಮಾನ ಮಾಡಲು ಕರೆ ಕೊಟ್ಟಿದೆ. ಬಿಹಾರದಿಂದ ತನ್ನ ಮೊದಲ ಹೆಜ್ಜೆ ಹಾಕಿದ ಕಿಸಾನ ಸಭಾ ತನ್ನ 25 ನೇ ಅಖಿಲ ಭಾರತ ಸುವರ್ಣ ಮಹೋತ್ಸವ ಸಮ್ಮೇಳನವನ್ನು ಬಿಹಾರ ರಾಜ್ಯದ ರಾಜಧಾನಿ ಪಾಟ್ನಾದಲ್ಲಿ ಏಪ್ರಿಲ್ 26, 27, 28 ರಂದು ನಡೆಸಲಿದೆ.

ಈ ಚಾರಿತ್ರಿಕ ಸಮ್ಮೇಳನದ ಪೂರ್ವದಲ್ಲಿ ರಾಷ್ಟ್ರದ ಎಲ್ಲಾ ರಾಜ್ಯ ಸಮ್ಮೇಳನಗಳು ನಡೆದು ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳಿಸಬೇಕಾಗಿದೆ.

ಕರ್ನಾಟಕ ರಾಜ್ಯ ಸಮಿತಿ ಈ ಜವಾಬ್ದಾರಿಯನ್ನು ನಿರ್ವಹಿಸಲು 4-2-86 ರಂದು ಸೇರಿ ಎಂಟನೇ ರಾಜ್ಯ ಸಮ್ಮೇಳನವನ್ನು ನಡೆಸುವ ಸುವರ್ಣಅವಕಾಶವನ್ನು ರಾಯಚೂರು ಜಿಲ್ಲೆಗೆ ಒದಗಿಸಿದೆ. ಜೊತೆಗೆ ಕರ್ನಾಟಕ ಪ್ರಾಂತ ರೈತ ಸಂಘ 1957 ನೇ ವರ್ಷದಿಂದ ಬೆಳೆದು ಬಂದ ಚರಿತ್ರೆಯ ಪುಸ್ತಿಕೆ ಮತ್ತು ಕಿಸಾನ್ ಸಭಾ ಕಾರ್ಯಕ್ರಮದ ಕಿರು ಪುಸ್ತಕವನ್ನು ಸಮ್ಮೇಳನದ ಸಮಯಕ್ಕೆ ಹೊರತರಲು ತೀರ್ಮಾನಿಸಿದೆ. ಐವತ್ತಕ್ಕಿಂತಲು ಹೆಚ್ಚು ತಾಲೂಕಾ ಸಮ್ಮೇಳನಗಳನ್ನು ಹದಿಮೂರು ಜಿಲ್ಲಾ ಸಮ್ಮೇಳನ ನಡೆಸಿ ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಕಳಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸಲು ಕರೆ ಕೊಡಲಾಗಿದೆ

ಈ ಸಮ್ಮೇಳನದಲ್ಲಿ ಪಾಲುಗೊಳ್ಳುವ ಪ್ರತಿನಿಧಿಗಳು, ಎರಡು ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ಒಂದು, ರಾಜ್ಯದ ಗ್ರಾಮೀಣ ಜನ ಜೀವನದಲ್ಲಿ ಆದ ಬದಲಾವಣೆ, ಭೂ ಸಂಬಂಧ, ಜನರ ಸಂಕಷ್ಟ, ಬೇಡಿಕೆ, ಆಶಯಗಳನ್ನು ಚರ್ಚಿಸಿ ಸಮಗ್ರವಾಗಿ ಅರ್ಥೈಸಿದಂತಾಗಬೇಕು. ಎರಡನೇಯದಾಗಿ ಅಖಿಲ ಭಾರತ ಕಿಸಾನ್ ಸಮ್ಮೇಳನದಲ್ಲಿ ಈ ತಿಳುವಳಿಕೆಯೊಂದಿಗೆ ಭಾಗವಹಿಸಿದ ಪ್ರತಿನಿಧಿಗಳು ಅದು ಕೊಟ್ಟ ಕರೆಯನ್ನು ಜನತೆ ಮತ್ತೆ ತೆಗೆದುಕೊಂಡುಹೋಗುವ ಜವಾಬ್ದಾರಿಯನ್ನು ನಿರ್ವಹಿಸುವಂತಹ ರಾಜ್ಯ ಸಮಿತಿಯನ್ನು ಆಯ್ಕೆಮಾಡಬೇಕಾಗಿದೆ.

ಈ ತಿಳುವಳಿಕೆ ಹೊಂದಿದ ಪ್ರತಿನಿಧಿಗಳು ರಾಜ್ಯ ಸಮ್ಮೇಳನ ಮತ್ತು ಅದರ ಪೂರ್ವದಲ್ಲಿ ತಾಲೂಕಾ ಸಮ್ಮೇಳನಗಳನ್ನು ನಡೆಸಿ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳಿಸಲು ರಾಜ್ಯ ಸಮಿತಿ ಕರೆ ಕೊಟ್ಟಿದೆ.

ಕರ್ನಾಟಕ ರಾಜ್ಯದಲ್ಲಿ ತಾಲೂಕಾ ಸಮ್ಮೇಳನ ಪ್ರಾಥಮಿಕ ಮೆಟ್ಟಲಾಗಿದೆ 24 ನೇ ಮಿಡ್ನಾಪುರ ಸಮ್ಮೇಳನ ಪ್ರಸ್ತುತ ಬಂಡವಾಳಶಾಹಿ ಆಳುವ

ಚಂದ್ರಶೇಖರ ಬಾಳೆ

ವರ್ಗ ತನ್ನ ಆರ್ಥಿಕ ಬಿಕ್ಕಟ್ಟನ್ನು ದೂಡಿಯುವ ಜನತೆಯ ಮೇಲೆ ಹೇರುತ್ತಿದ್ದು, ಗ್ರಾಮೀಣ ರೈತಾಪಿ ವಿಭಾಗಗಳು, ತಮ್ಮ ಬೆಳೆದ ವಸ್ತುಗಳನ್ನು ಮಾರುವಾಗಲು, ಅವಶ್ಯಕ ಕೈಗಾರಿಕಾ ವಸ್ತುಗಳನ್ನು ಖರೀದಿಸುವಾಗಲು ನಿರಂತರ ಶೋಷಣೆಗೊಳಪಟ್ಟು, ಕೊಳ್ಳುವ ಶಕ್ತಿಯನ್ನು ದಿನೇದಿನೇ ಕಳೆದುಕೊಳ್ಳುತ್ತಿದ್ದಾರೆ, ಕೃಷಿ ಕೂಲಿಕಾರರ ಸಂಖ್ಯೆ ಹೆಚ್ಚಾಗುತ್ತಿದೆ. ಬಡರೈತ, ಮಧ್ಯಮ ರೈತರು ಭೂ ಸಂಬಂಧವನ್ನು ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಶ್ರೀಮಂತ ರೈತ ವಿಭಾಗವು ಕೂಡ ಬಂಡವಾಳಶಾಹಿ ಮಾರುಕಟ್ಟೆಯಿಂದ ಸಮಾಜದಲ್ಲಿ ತನ್ನ ಸ್ಥಾನಮಾನವನ್ನು ಕಳೆದುಕೊಂಡು ಬೆಳೆದ ಮಾಲಿಗೆ ಬೆಂಬಲಿತ ಬೆಲೆ ಇನ್ನಿತರ ಬೇಡಿಕೆಗಳಿಗಾಗಿ ಬೀದಿಗಿಳಿಯುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ರಾಷ್ಟ್ರವ್ಯಾಪಿಯಾಗಿ ಕೃಷಿ ಕೂಲಿಕಾರರ, ಬಡರೈತರ ನೇತೃತ್ವದಲ್ಲಿ ಮಧ್ಯಮ, ಶ್ರೀಮಂತ ರೈತರನ್ನೊಳಗೊಂಡಂತೆ ವಿಶಾಲ ಚಳುವಳಿಯನ್ನು ಬೆಳೆಸಲು ಕರೆ ಕೊಟ್ಟಿದೆ. ಜನರ ಸಂಕಷ್ಟಗಳನ್ನು ಅರಿತ ಬಂಡವಾಳಶಾಹಿಗಳು ಭೂಮಾಲಿಕರ, ಶ್ರೀಮಂತ ರೈತರ ಮೂಗಿನ ನೇರಕ್ಕೆ ಸಂಘಟನೆಯನ್ನು ಹುಟ್ಟು ಹಾಕುವದು, ಚಳುವಳಿಗಳನ್ನು ಅರ್ಧಕ್ಕೆ ನಿಲ್ಲಿಸುವುದನ್ನು ಮುಂದೆ ಕೊಂಡೊಯ್ಯುವಂತಾಗಬೇಕು. ಕೃಷಿ ಕೂಲಿಗಾರ, ಬಡರೈತರು ಪಾಳೆಗಾರಿ, ಅರೆ ಪಾಳೆಯಗಾರಿ, ಶೋಷಣೆಯಲ್ಲಿ ತೊಳಲಾಡುತ್ತಿದ್ದಾರೆ, ಆ ಬೇಡಿಕೆಗಳಿಗಾಗಿ ಹಾಗೂ ಸಾಮೂಹಿಕವಾಗಿ ಎಲ್ಲಾ ರೈತರ ಬೇಡಿಕೆಗಳಿಗೊಳಪಟ್ಟಂತೆ ಹೋರಾಡುತ್ತಲೆ, ಪ್ರತ್ಯೇಕವಾದಿ, ಕೋಮುವಾದಿ, ಜಾತಿ ಸಂಘಟನಾ ಶಕ್ತಿಗಳನ್ನು ಸದೆ ಬಡಿಯಲು ಕರೆಕೊಟ್ಟಿದೆ.

ಈ ಕಣ್ಣೋಟದಲ್ಲಿ ಆಯಾ ತಾಲೂಕು ಸಂಘಟನೆಗಳು, ನಡೆಸಿದ, ಹೋರಾಟ, ಚಳುವಳಿಯ ಕುರಿತು, ಮತ್ತು ಗ್ರಾಮೀಣ ಭೂಸಂಬಂಧದಲ್ಲಾದ ಬದಲಾವಣೆಯ ಕುರಿತು, ಗ್ರಾಮದ ಜನರ ಮಧ್ಯದಿಂದ ಬರುತ್ತಿರುವ ಕಾರ್ಯಕರ್ತರು ತಾಲೂಕು ಸಮ್ಮೇಳನದಲ್ಲಿ ದೀರ್ಘ ಚರ್ಚೆಯನ್ನು ನಡೆಸಬೇಕು. ಮೇಲಿನ ಸಮಿತಿಯ ಕರೆಯನ್ನು ಯಾಕೆ ಜಾರಿ ಮಾಡಲಾಗಲಿಲ್ಲ, ನ್ಯೂನ್ಯತೆಗಳೇನು ಎಂಬುದನ್ನು ಗುರುತಿಸಲು ಸಾಧ್ಯವಾಗಬೇಕು, ಕೆಳಗಿನ ಅನುಭವ ಹಾಗೂ ಸಂಘಟನಾ ಕೊರತೆಗಳ ವಿವರಣೆಯನ್ನು ಜಿಲ್ಲಾ ಸಮ್ಮೇಳನಕ್ಕೆ ಕೊಂಡೊಯ್ಯಬೇಕು, ಅನುಭವದೊಂದಿಗೆ ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳೂ ಬರುವದಾಗಿದೆ.

ತಾಲೂಕಾ ಸಮ್ಮೇಳನದಿಂದ ಅಖಿಲ ಭಾರತ ಮಟ್ಟದವರೆಗೆ, ಮೇಲಿನಿಂದ ಕೆಳಗೆ, ಕೆಳಗಿನಿಂದ ಮೇಲೆ ವಿನಿಮಯ ಮಾಡುವ ಹಾಗೂ ಅತಿ ಕೆಳ ಸಮಿತಿಯಿಂದ ಕೇಂದ್ರ, ಕೇಂದ್ರದ ಮಂಡಳಿಯವರೆಗೆ ಪ್ರಜಾಪ್ರಭುತ್ವ ರೀತಿಯಲ್ಲಿ, ಕಿಸಾನ್ ಸಭಾದ ಸಂವಿಧಾನವನ್ನು ಚಾಚೂತಪ್ಪದೆ ಪಾಲಿಸಲಾಗುತ್ತದೆ. ಕಿಸಾನ ಸಭಾದ ಕಾರ್ಯಕ್ರಮ ಒಂದು ಹರಿತವಾದ ಆಯುಧವಿದ್ದಂತೆ ಎಂದು 50 ವರ್ಷದ ಅನುಭವ ಸಾಧಿಸಿದೆ, ಆಯುಧವನ್ನು ಎತ್ತಿ ಹಿಡಿದು ಬಳಸಿದರೆ ಮಾತ್ರ ಪ್ರಯೋಜನ ತಿಳಿಯುವದು, ಆಂತರಿಕ ಸಂಘಟನೆಯೇ ಕಾರ್ಯಕ್ರಮವನ್ನು ಎತ್ತಿ ಹಿಡಿಯಬೇಕಾದ ದೇಹವಾಗಿದೆ.

ಐವತ್ತು ವರ್ಷದ ಅನುಭವದಿಂದ ಒರೆಗಲ್ಲಿಗೆ ಹಚ್ಚಿದ ಕಾರ್ಯಕ್ರಮವಿದ್ದು ರಾಷ್ಟ್ರದ ಪ್ರತಿ ಗ್ರಾಮಕ್ಕೆ ಅದನ್ನೊಯ್ಯುವ ಸಂಘಟನೆಯ ಅವಶ್ಯಕತೆಯಿದೆ, ಇದು ನೂರಕ್ಕೆ ನೂರು ಕರ್ನಾಟಕ ರಾಜ್ಯದ ಸಮಸ್ಯೆಯೇ ಆಗಿದೆ, ಎಂಟನೇ ರಾಜ್ಯ ಸಮ್ಮೇಳನವನ್ನು ಈ ತಿಳುವಳಿಕೆ, ದೃಷ್ಟಿ ಕೋನದಲ್ಲಿ ನಡೆಸಬೇಕಾಗಿದೆ.

○

ಸಾಂಸ್ಕೃತಿಕ ರಂಗ

ಅವಗಣನೆಗೆ ಗುರಿಯಾದ ನಿರಂಜನರ ಸಾಹಿತ್ಯ

ನಿರಂಜನರು ಕನ್ನಡದ ಪ್ರಮುಖ ಸಾಹಿತಿಗಳಲ್ಲೊಬ್ಬರಾದರೂ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಶೋಷಿತ ಜನವರ್ಗದ ದನಿಯನ್ನು ಸಾಹಿತ್ಯದಲ್ಲಿ ಮೂಡಿಸಿದವರಲ್ಲಿ ಮೊದಲಿಗರಾದರೂ ಇವರ ಕೃತಿಗಳ ಬಗ್ಗೆ ವಿಮರ್ಶೆ, ಮೌಲ್ಯ ಮಾಪನ ಇದುವರೆಗೂ ನಡೆದಿರಲಿಲ್ಲ. ಯಾವ ಯಾವುದೋ ಸಾಹಿತಿಗಳನ್ನು ಎತ್ತಿಮೆರೆಸಿ ಕೊಂಡಾಡಿದ ಅಭಿನಂದನ ಗ್ರಂಥಗಳ ವಿಮರ್ಶಾ ಮಾನೋಗ್ರಾಫ್‌ಗಳ ಸುರಿಮಳೆಯನ್ನೇ ಸುರಿಸಿದ ಕನ್ನಡ ವಿಮರ್ಶಾ ಪ್ರಪಂಚ ನಿರಂಜನರನ್ನು ಉಪೇಕ್ಷಿಸಿದ್ದೇಕೆ? ಸಾಹಿತಿಯಾಗಿ ಮಾತ್ರವಲ್ಲ ಭಾರತೀಯ ಕಥಾ ಸಾಹಿತ್ಯದಲ್ಲಿಯೇ ಅತ್ಯಪೂರ್ವವೆನ್ನಬಹುದಾದ ವಿಶ್ವಕಥಾಕೋಶದ ಸಂಪಾದಕರಾಗಿ ತೋರಿಸಿದ ಶ್ರಮ, ನೈಪುಣ್ಯತೆಗಳು, ಜ್ಞಾನ ಗಂಗೋತ್ರಿಯೆಂಬ ಕಿರಿಯರ ವಿಶ್ವಕೋಶದ ಅಚ್ಚುಕಟ್ಟುತನಗಳೂ ಕೂಡ ಜನಗಣನೆಗೆ ಬಾರಲಿಲ್ಲವೇಕೆ ಎಂಬುದು ಒಂದು ಅನ್ವೇಷಿಸ ಬೇಕಾದ ಪ್ರಶ್ನೆ. ಇದಕ್ಕೂ ಕನ್ನಡ ಸಂದರ್ಭದ ಸಾಮಾಜಿಕ ಮನಸ್ಸಿನ (social conciousness : ಆಯಾ ಕಾಲ ಘಟ್ಟದಲ್ಲಿ ಪ್ರಧಾನವಾದ ಮೌಲ್ಯಗಳು, ಚಿಂತನೆಗಳನ್ನು ರೂಪಿಸಿದ, ಸಾಹಿತ್ಯ, ಕಲೆ, ವಿಜ್ಞಾನ ಎಂಬೀ ಎಲ್ಲ ಸೃಜನಶೀಲ ಅಭಿವ್ಯಕ್ತಿಗೆ ಕಾರಣವಾದ ಸಾಮೂಹಿ ಮನಸ್ಸಿನ ಮೊತ್ತ) ಅಥವಾ ಸಾಹಿತ್ಯಕ ಪರಿಸರ ಬೆಳವಣಿಗೆಯ, ವಿಮರ್ಶಾ ಮೌಲ್ಯಗಳ ಬೆಳವಣಿಗೆಯ ವಿವಿಧ ಘಟ್ಟಗಳನ್ನು ಅನ್ವೇಷಿಸ ಬೇಕಾಗುತ್ತದೆ. ಆಗ ಕನ್ನಡದ ಸಾಮಾಜಿಕ ಸಂದರ್ಭದಲ್ಲಿ ಪಾಳೆಯಗಾರಿ ಮೌಲ್ಯಗಳ ವಿರುದ್ಧ ಸಾಮಾಜಿಕ ಸುಧಾರಣೆಗಳ ಚಳುವಳಿ, ವಸಾಹತು ಶಾಹಿಯ ವಿರುದ್ಧ ನೆರೆಯ ರಾಜ್ಯಗಳಿಗೆ ಹೋಲಿಸಿದರೆ ತೀವ್ರವಾದ ಚಳುವಳಿ, ಪಾಳೆಯಗಾರಿ ಆರ್ಥಿಕ ಸಂಬಂಧಗಳ, ಭೂ ಸಂಬಂಧಗಳ ಬಗ್ಗೆ ತೀವ್ರ ಚಳುವಳಿ ಬೆಳೆಯದಿರುವಾಗ ಕನ್ನಡ ಸಾಹಿತ್ಯದಲ್ಲಿ ಪಾಳೆಯಗಾರಿ ಮೌಲ್ಯಗಳ ಚಿತ್ರಣ ಗತಕಾಲದ ವೈಭವೀಕರಣಗಳೇ, ಸಮಾಜದಲ್ಲಿನ ಕಷ್ಟ ಕೋಟಲೆಗಳ ಹಸೀ ಹಸೀ ಚಿತ್ರಣಗಳೇ ಪ್ರಗತಿ ಶೀಲವೆಂದೆನ್ನಿಸಿಕೊಂಡ ಸಂದರ್ಭದಲ್ಲಿ, ಪಾಳೆಯಗಾರಿ ಮೌಲ್ಯಗಳ ವಿರುದ್ಧವಾದ, ಬಂಡವಾಳಶಾಹಿ ಸೋಗಲಾಡಿತನದ ಬದುಕಿನ ಚಿತ್ರಣವನ್ನು ನೀಡಿದ ನಿರಂಜನರು ಕನ್ನಡ ಸಾಹಿತ್ಯಕ

ಜಿ. ಎನ್. ನಾಗರಾಜ್

ಪರಿಸರದಲ್ಲಿ ನಿರ್ಲಕ್ಷ್ಯಕ್ಕೊಳಗಾಗಿದ್ದು ಆಶ್ಚರ್ಯವೇನಲ್ಲ. ಅದರಲ್ಲಿಯೂ ಅವರು ಪ್ರಗತಿಶೀಲತೆಯ ಹೆಸರಿನಲ್ಲಿ, ವಾಸ್ತವತೆಯ ಹೆಸರಿನಲ್ಲಿ ಜನಪ್ರಿಯ ಮಸಾಲೆಯನ್ನು ವಿರೋಧಿಸಿದುದಕ್ಕಾಗಿ, 'ಕಮ್ಯುನಿಸ್ಟ್' ಎಂಬ ಹಣೆಪಟ್ಟಿ ಕಟ್ಟಿ ಅವರ ಮೇಲೆ ನಡೆದ ಧಾಳಿಯೂ ಕೂಡ ಇದಕ್ಕೆ ಕಾರಣವಾಯಿತು. ಈ ವಿಷಯದ ವಿವರ ಚರ್ಚೆಗೀಗ ಅವಕಾಶವಿಲ್ಲವಾದರೂ ಇದು ಅವಶ್ಯಕವಾಗಿ ಆಗಬೇಕಾಗಿರುವ ಕಾರ್ಯಗಳಲ್ಲೊಂದು ಎಂಬುದರಲ್ಲಿ ಸಂದೇಹವಿಲ್ಲ

ಭಾರತದ ಅನೇಕ ಭಾಷೆಗಳಿಗೆ ವ್ಯಾಪಕವಾಗಿ ಭಾಷಾಂತರವಾಗಿರುವ ಚಿರಸ್ಮರಣೆಯ ಈ ಲೇಖಕರ ಬಗ್ಗೆ ಇತ್ತೀಚೆಗೆ ಎರಡು ವಿಚಾರ ಸಂಕಿರಣಗಳು ನಡೆದುವು. ಅವುಗಳಲ್ಲಿ ಮೊದಲನೆಯದು ಕಾರ್ಮಿಕ ಕಲಾಭಿಮಾನಿಗಳೇ ಪ್ರಧಾನವಾಗಿರುವ 'ಕರ್ನಾಟಕ ಪ್ರಗತಿಪರ ಕಲಾರಂಗ'ವೆಂಬ ಸಾಂಸ್ಕೃತಿಕ ಸಂಘಟನೆ ಏರ್ಪಡಿಸಿದ್ದು. ಎರಡನೆಯದು ಬಹಳ ತಡವಾಗಿಯಾದರೂ ಕರ್ನಾಟಕ ಸಾಹಿತ್ಯ ಅಕಾಡಮಿ ಹಾಗೂ ನಿರಂಜನರ ಸನ್ಮಾನ ಸಮಿತಿ ಏರ್ಪಡಿಸಿದ್ದು. ನಿರಂಜನರ ಸಾಹಿತ್ಯದ ಬಗ್ಗೆ ಮೌಲ್ಯಮಾಪನಕ್ಕೆ ಮೊದಲಿಟ್ಟದ್ದು ಮಲಯಾಳಿ ಮಾತೃಭಾಷೆಯ ಕಾರ್ಮಿಕರ ಸಂಘಟನೆಯೊಂದು ಎಂಬುದು. ಗಮನಾರ್ಹ ಸಂಗತಿ.

ಕರ್ನಾಟಕದ ಪ್ರಗತಿಪರ ಕಲಾರಂಗದ ಆಶ್ರಯದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಪ್ರಸಿದ್ಧ ವಿಮರ್ಶನಕಾರ ವೀರಣ್ಣನವರು 'ಐಕ್ಯರಂಗ'ದ ಜಿ. ಎನ್. ನಾಗರಾಜ್‌ರವರೂ, ಪಿ. ಕೆ. ಸುಬ್ರಮಣಿಯವರೂ ಮಾತನಾಡಿದರು. ಐಕ್ಯರಂಗದ ವ್ಯವಸ್ಥಾಪಕ ಸಂಪಾದಕ ಕಾ. ಎನ್. ಕೆ. ಉಪಾಧ್ಯಾಯರು ಅಧ್ಯಕ್ಷತೆ ವಹಿಸಿದ್ದರು. ವೀರಣ್ಣನವರು ಮಾತನಾಡುತ್ತಾ, ಸಾಹಿತ್ಯ ಸೃಜನಕ್ಕೂ ಸಾಮಾಜಿಕ ಪರಿಸರಕ್ಕೂ ಇರುವ ಸಂಬಂಧವನ್ನು ಪ್ರಸ್ತಾಪಿಸಿ, ಸಾಮಾಜಿಕ ಚಳುವಳಿಗಳು ಇಡೀ ಸಮಾಜದ ಮೇಲೆ ಪರಿಣಾಮ ಬೀರುವುದರ ಮೂಲಕ ಸಾಹಿತ್ಯದ ಮೇಲೂ ದಟ್ಟವಾದ ಪರಿಣಾಮ ಬೀರುತ್ತವೆ ಇದಕ್ಕೆ ತೆಲಂಗಾಣದ ವೀರ ಹೋರಾಟವೇ ಒಂದು ಉದಾಹರಣೆ ಇದು ಅನೇಕ ತೆಲುಗಿನ ಸಾಹಿತ್ಯಕ್ಕೆ ಸ್ಪೂರ್ತಿ ನೀಡಿತು. ಈ ಚಳುವಳಿಗಳೊಂದಿಗೆ ವೈಯುಕ್ತಿಕ ಸಂಬಂಧವೂ ಕೂಡ ಸಾಹಿತಿಯ ಸೃಷ್ಟಿಯ ತತ್ವದ ಮೇಲೆ ಪರಿಣಾಮ ಬೀರುತ್ತದೆ. ಆದುದರಿಂದ ಸಾಹಿತ್ಯದ ಸತ್ವಹೀನತೆಗೆ ಕೇವಲ ಸಾಹಿತಿ ಮಾತ್ರವೇ ಹೊಣೆಯಾಗಲಾರ. ಇಡೀ ಪರಿಸರ, ಸಾಮಾಜಿಕ ಸಂದರ್ಭ

(6ನೇ ಪುಟ ನೋಡಿ)

ಕೇಂದ್ರ ಸರಕಾರದ ಬಜೆಟ್

ಆಕರ್ಷಕ ಘೋಷಣೆಗಳು - ಹೊಸ ಹೊರೆಗಳು

ರಾಜೀವ ಗಾಂಧೀಯವರ ಕೇಂದ್ರ ಸರ್ಕಾರದ ಎರಡನೇ ವರ್ಷದ ಬಜೆಟ್ ದೇಶದ ಅರ್ಥಿಕತೆಯನ್ನು ಮತ್ತಷ್ಟು ಕುಸಿತಗೊಳ್ಳಿಸುವುದರಲ್ಲಿ ಸಂಶಯವಿಲ್ಲ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸತತ ಆರೋಪಿಸುತ್ತ ಬಂದಂತೆಯೇ ವಿಶ್ವಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ಆದೇಶವನ್ನೇ ಒಳಗೊಂಡಿರುವ ಅಂದಾಜು ಪತ್ರಿಕೆ ಆದಾಗಿದೆ.

ಹಣಕಾಸು ಮಂತ್ರಿ ವಿ. ಪಿ ಸಿಂಗ್ ಅವರು ಮಂಡಿಸಿದ್ದ 1985—86ರ ಕೇಂದ್ರ ಬಜೆಟ್ ಬಲಸಂಧೀಯ ಒಲವು ಉಳ್ಳದ್ದೆಂಬ ಆರೋಪಕ್ಕೊಳಗಾಗಿತ್ತು. ಅಂಥ ಆರೋಪದಿಂದ ಮುಕ್ತವಾಗಬೇಕೆಂಬ ಒಂದೇ ಉದ್ದೇಶದಿಂದ ಹಳೇ ಧ್ಯೇಯ-ಧೋರಣೆಗಳನ್ನು ಹೊಂದಿರುವ ಹೊಸ ಬಜೆಟ್ಟಿಗೆ ಆಕರ್ಷಕ ಬಣ್ಣ ಹಚ್ಚಿ ಬಡತನ ನಿರ್ಮೂಲನೆ, ಸ್ವಾವಲಂಬನೆ, ಗ್ರಾಮೀಣಾಭಿವೃದ್ಧಿ, ಕೃಷಿ ಅಭಿವೃದ್ಧಿ, ಸಾಮಾನ್ಯ ಜನತೆಗೆ ನೀಡಲಾಗಿರುವ ರಿಯಾಯಿತಿ ಮುಂತಾದ ಸುಂದರ ಘೋಷಣೆಗಳಿಂದ ಜನರನ್ನು ವಂಚಿಸಿ ಗುತ್ತೇದಾರಿ ಬಂಡವಳದಾರರ ಹಿತಸಾಧನೆಯನ್ನೇ ಮಾಡಿದ್ದಾರೆ ಅರ್ಥಮಂತ್ರಿಗಳು

ತನ್ನ ಬುದ್ಧಿವಂತಿಕೆಯಿಂದ ಲೋಕಸಭೆಗೇನೇ ಮೋಸಮಾಡಿ, ಹೊಸ ವರ್ಷದ ಬಜೆಟ್ ಮಂಡಿಸುವ ಮುಂಚೆಯೇ ಅಕ್ಕಿ, ಗೋಧಿ, ಸಕ್ಕರೆ ರಸಗೊಬ್ಬರ, ಪೆಟ್ರೋಲ್, ಡೀಜಲ್ ಚಿಮಣಿ ಎಣ್ಣೆ, ಪೆಟ್ರೋಲಿಯಂ ಉತ್ಪಾದನೆಗಳ ಬೆಲೆಗಳನ್ನು ಅತಿಯಾಗಿ ಹೆಚ್ಚಿಸಿಕೊಂಡಿದ್ದಾರೆ. ಅದರಿಂದಾಗಿ ಪ್ರತಿವರ್ಷ 800 ಕೋಟಿ ರೂ. ಗಿಂತಲೂ ಹೆಚ್ಚು ಆದಾಯ ಪಡೆಯುವ ವ್ಯವಸ್ಥೆಮಾಡಿಕೊಂಡು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ದೊರೆಗಳನ್ನು ಸಮಾಧಾನಗೊಳಿಸಿದ್ದಾರೆ. ಇದಾದ ನಂತರ ಸರ್ವಸಾಮಾನ್ಯ ಬಜೆಟ್‌ನಲ್ಲಿ ರೇಲ್ವೆ ಪ್ರಯಾಣ ದರಗಳಂತ ಕರ ಹೆಚ್ಚಳಗಳ ಮೂಲಕ 445 ಕೋಟಿ ರೂ. ಹೆಚ್ಚಳ ತೋರಿಸಿಯೂ ಬಜೆಟ್ ಕೊರತೆಯನ್ನು 3650 ಕೋಟಿರೂ ಗಳೆಂದು ತೋರಿಸಿದ್ದಾರೆ. ಆದರೆ ವಾಸ್ತವವಾಗಿ ನೋಡಿದರೆ ಅದು ನಿಜಾಂಶವಲ್ಲವೆಂಬ ಸಂಗತಿ ಕಾಂಗ್ರೆಸ್ ಆಡಳಿತ ತೋರಿಸಿಕೊಟ್ಟಿದೆ 1985-86ರ ಮೊದಲ 9 ತಿಂಗಳ ಕೊರತೆಯೇ ಈಗಾಗಲೇ 5000 ಕೋಟಿ ರೂ. ಮೀರಿದೆ. ವರ್ಷದ ಕೊನೆಯಲ್ಲಿ ಅದು ಅದು 10,000 ಕೋಟಿ ಆಗಬಹುದು ಯಾಕೆಂದರೆ 84-85 ರಲ್ಲೇ ಕೊರತೆ 6000 ಕೋಟಿ ರೂ ಮೀರಿತ್ತು. ಈ ರೀತಿಯ ಕೊರತೆ ಬಜೆಟಿಂದಾಗಿ, ಶ್ರೀ ಸಾಮಾನ್ಯರಿಗೆ ಅಲ್ಪಸ್ವಲ್ಪ ರಿಯಾಯಿತಿ ತೋರಿಸಿದರೂ ಕೂಡ ಅದು ಅತಿ ಪ್ರಸರಣದ ಹೊಟ್ಟೆಯಲ್ಲಿ ಕರಗಿ ಹೋಗುತ್ತದೆ. ಆದ್ದರಿಂದ 21ನೇಯ ಶತಮಾನದತ್ತ ಹಾರಲು ಹೊರಟಿರುವ ರಾಜೀವಗಾಂಧಿ ಸರಕಾರದ ಬಜೆಟ್ ಬಡವರನ್ನು ಮತ್ತಷ್ಟು ಬಡತನದ ಅಗ್ನಿಕುಂಡಕ್ಕೆ ದೂಡಿ, ರಾಷ್ಟ್ರೀಯ-ಅಂತರರಾಷ್ಟ್ರೀಯ ಗುತ್ತೇದಾರಿಗಳ ಹೆಚ್ಚಿನ ಸುಲಿಗೆ ಲಾಭಕ್ಕೆ ಎಡೆಮಾಡಿಕೊಟ್ಟಿದೆ. ವಾಸ್ತವ ಪರಿಸ್ಥಿತಿಯೇ ಇದಕ್ಕೆ ಸಾಕ್ಷಿ

ಉದಾಹರಣೆಗಾಗಿ ದಿಲ್ಲಿಯಬೋಟ್ ಕ್ಲಬ್ಬಿನಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ, ಕಾಂಗ್ರೆಯ ಯುವಕ ಲೋಕ ಸಭೆ ಸದಸ್ಯರಾದ ಪಿ. ಆರ್. ಕುಮಾರ್ ಮಂಗಳಮ್ ಅವರು ತಮ್ಮ ಭಾಷಣದಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳ ಕೆಲವು ಏಜಂಟರು ಕೇಂದ್ರ ಸರ್ಕಾರದ ಅಧಿಕಾರಿ ವರ್ಗದಲ್ಲಿ ಸೇರಿಕೊಂಡು ಬೆಲೆ ಹೆಚ್ಚಿಸುವ ಕುತಂತ್ರ ಮಾಡಿದ್ದಾರೆಂದು ನೇರ ಆರೋಪ ಹೊರಿಸಿ, ಬೆಲೆ ಹೆಚ್ಚಳಕ್ಕನುಸರಿಸಿ ಕೇಂದ್ರ ಸರ್ಕಾರ ತನ್ನ ನೌಕರರಿಗೆ ಎರಡು ಕಂತಿನ ತುಟ್ಟಿ ಭತ್ತೆ ರೂ.32 ಕೊಡಮಾಡಿದ್ದರೂ ಜನೇವರಿ ತಿಂಗಳಿಂದ ನೌಕರದಾರರು ಪ್ರತಿ ತಿಂಗಳೂ ರೂ. 200 ಹೆಚ್ಚಿಗೆ ಖರ್ಚು ಮಾಡುತ್ತಿದ್ದಾರೆಂದು ಹೇಳಿದ್ದಾರೆ.

ಸೋಮನಾಥ ಚಟರ್ಜಿ ಅವರ ಸವಾಲು

ಸಿಪಿಐ (ಎಂ) ಪಕ್ಷದ ಲೋಕಸಭೆ ಸದಸ್ಯರಾದ ಸೋಮನಾಥ ಚಟರ್ಜಿಯವರು ಬೆಲೆ ಹೆಚ್ಚಳದ ವಿರುದ್ಧ ಲೋಕಸಭೆಯಲ್ಲಿ ಮಂಡಿಸಿದ ನಿಲುವಳಿ ಸೂಚನೆಯ ಮೇಲೆ ಮಾಡಿದ ಭಾಷಣದಲ್ಲಿ "ನಾವು 21ನೇಯ ಶತಮಾನಕ್ಕೆ ಹೋಗುತ್ತವರಾಗಿರುವುದರಿಂದ ಬೆಲೆ ಹೆಚ್ಚಿಸಲೇಬೇಕಾಗಿದೆಂದು ರಾಜೀವ್ ಗಾಂಧಿ ಹೇಳುತ್ತಿದ್ದಾರೆ' "ಜನರಿಗೆ ಅನ್ನ, ಬಟ್ಟೆ, ಆಶ್ರಯ ಸಿಗುವ ತನಕ ತಮ್ಮ ಪಕ್ಷ ಅಧಿಕಾರದಲ್ಲುಳಿಯುತ್ತದೆಂದು" ಮಂತ್ರಿ ಭಗತ್ ಜಾ ಆಜಾದ್ ಹೇಳಿದ್ದಾರೆ. ಕಳೆದ 38 ವರ್ಷಗಳಿಂದ ದೇಶದ ಆಡಳಿತ ನಡೆಸಿದವರಾರು ? 6 ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿದವರಾರು ? ಆರ್ಥಿಕ ಧೋರಣೆಯನ್ನು ನಿರ್ಧರಿಸಿದವರಾರು ? ವಿದೇಶಿ ವಿನಿಮಯ ಸಂಪನ್ಮೂಲಗಳ ಜವಾಬ್ದಾರಿ ಹೊತ್ತವರಾರು ? ಎಂಬ ಪ್ರಶ್ನೆ ಕೇಳಿದ್ದಾರೆ.

ಕಾಂಗ್ರೆ ವಿರುದ್ಧ ಬದಲಿ ವ್ಯವಸ್ಥೆಯನ್ನು ಕಂಡುಹಿಡಿಯುವುದರಲ್ಲಿ ಜನರು ವಿಫಲಗೊಂಡಿರುವುದರಿಂದ ತಾವೇ ಆಳುತ್ತೇವೆಂಬ ಜಂಭವನ್ನು ಪ್ರಧಾನ ಮಂತ್ರಿಯವರು ಕೊಚ್ಚಿಕೊಳ್ಳುತ್ತಿದ್ದಾರೆ, ಆದರೆ ಜನರ ಸಂಕಷ್ಟಗಳನ್ನು ನಿವಾರಿಸಲು ಅವರ ಪಕ್ಷದ ಆಡಳಿತ ಏನು ಮಾಡಿದೆಂಬ ಸವಾಲು ಹಾಕಿದ್ದಾರೆ ಚಟರ್ಜಿಯವರು

ಬಜೆಟ್ ನೋಡಲಿಕ್ಕೆ ಸುಂದರವಾಗಿದೆಂದೂ ಅಲ್ಲಿ-ಇಲ್ಲಿ ಜನರಿಗೆ ಸ್ವಲ್ಪ ಪರಿಹಾರ ಒದಗಿಸಲಾಗಿದೆಂದೂ ತೋರಿಸಲಾಗಿದೆ. ಆದರೆ ಬಜೆಟ್ಟನ್ನು ಬಿಟ್ಟು, ಆಡಳಿತೆಯ ಆಜ್ಞೆ ಪ್ರಕಾರ ಬೆಲೆಗಳನ್ನು ಹೆಚ್ಚಿಸಿ, ಅದರಿಂದ ಬರುವ ಲಾಭದಿಂದ ರಾಜ್ಯ ಸರ್ಕಾರಗಳನ್ನು ವಂಚಿಸಲಾಗಿದೆ. ಬೆಲೆ ಹೆಚ್ಚಳದಿಂದಾಗಿ ಕೇಂದ್ರ ಸರ್ಕಾರ ಗಳಿಸುವ ಲಾಭದ ಪಾಲು ರಾಜ್ಯ ಸರ್ಕಾರಗಳಿಗೆ ಲಭ್ಯವಾಗುವುದಿಲ್ಲ. ಅದರೆ ಕೇಂದ್ರ ಸರ್ಕಾರ ಕೈಗೊಂಡ ಬೆಲೆ ಹೆಚ್ಚಳ ರಾಜ್ಯ ಸರ್ಕಾರಗಳ ಮೇಲೆ ಹೆಚ್ಚಿನ ಹೊರೆ ಹೇರುತ್ತದೆ. ಮಾತ್ರವಲ್ಲ ಕೇಂದ್ರ ಸರ್ಕಾರದ ನೀತಿ ಫಲವಾಗಿ

ಎನ್. ಕೆ. ಉಪಾಧ್ಯಾಯ

ತಾವು ಕೂಡ ಬೆಲೆ ಹೆಚ್ಚಿಸುವಂಥ ಜನವಿರೋಧಿ ಕ್ರಮ ತೆಗೆದುಕೊಳ್ಳುವಂತ ಸಂದಿಗ್ಧ ಪರಿಸ್ಥಿತಿ ಉಂಟಾಗುತ್ತದೆಂದೂ, ವಿರೋಧ ಪಕ್ಷಗಳ ಸಂಪನ್ಮೂಲಗಳಲ್ಲಿ ಕಡಿತ ಉಂಟುಮಾಡಿ ಅವು ಜನರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ಮಾಡಿ, ಆ ಸರ್ಕಾರಗಳು ಅಪ್ರಿಯವಾಗುವಂತೆ ಮಾಡುವ ಕುತಂತ್ರ ಆದಾಗಿದೆಂದೂ ಆರೋಪಿಸಿದ್ದಾರೆ.

ಬೆಲೆ ಹೆಚ್ಚಳದಿಂದ ಪಡೆಯುವ ಹಣವನ್ನು ಬಡವರ ಉದ್ಧಾರಕ್ಕಾಗಿ ವಿನಿಯೋಗಿಸಲಾಗುವುದೆಂದೂ ಪೆಟ್ರೋಲ್, ಡೀಜಲ್‌ಗಳ ಉಪಯೋಗವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಬೆಲೆ ಹೆಚ್ಚಿಸಲಾಗಿದೆಂದೂ ರಾಜೀವಗಾಂಧಿ ಹೇಳುವ ವಾದವನ್ನು ಸೋಮನಾಥ ಚಟರ್ಜಿ ಅಲ್ಲಗಳೆದಿದ್ದಾರೆ ನಮ್ಮ ದೇಶದಲ್ಲಿ ಶೇ 60% ರಷ್ಟು ಮೋಟಾರು ಕಾರುಗಳು ಹೆಚ್ಚಾಗುತ್ತಿರುವಾಗ, ಶೇ 28 ರಷ್ಟು ಎರಡು ಚಕ್ರಗಳ ವಾಹನಗಳು ಜಾಸ್ತಿಯಾಗುತ್ತಿರುವಾಗ, ಹೊಸ ಮಾಡೆಲಿನ ಕಾರು, ದ್ವಿಚಕ್ರವಾಹನಗಳು ಬೀದಿಗಿಳಿಯುತ್ತಿರುವಾಗ ಪೆಟ್ರೋಲ್ ಬಳಕೆಯನ್ನು ಬರೀ ಬೆಲೆ ಹೆಚ್ಚಳದ ಮೂಲಕ ತಡೆಹಿಡಿಯಲು ಸಾಧ್ಯವೆ ? ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ಪೆಟ್ರೋಲ್ ಬೆಲೆ ಇಳಿಮುಖವಾಗುತ್ತಿರುವಾಗ ಕಾಂಗ್ರೆ ಸರಕಾರದ ಬೆಲೆ ಹೆಚ್ಚಿಸುವ ನೀತಿ ಖಂಡನೀಯವೆಂದು ಹೇಳಿದ್ದಾರೆ. ಡೀಜಲ್ ಬೆಲೆ ಹೆಚ್ಚಳದಿಂದಾಗಿ ನೀರು ಪೂರೈಕೆ, ಒಕ್ಕಲುತನ, ಬಸ್ ಸಂಚಾರವನ್ನು ನಿಲ್ಲಿಸಲಿಕ್ಕಾಗುತ್ತಿದೆಯೇ ? ಹೋದ ವರ್ಷ ಕೂಡ ಪೆಟ್ರೋಲ್ ಡೀಜಲ್ ಬೆಲೆಯನ್ನು ಆಡಳಿತಾತ್ಮಕವಾಗಿ ಹೆಚ್ಚಿಸಲಾಗಿತ್ತು. ಆದರೆ ಆದರ ವಿನಿಯೋಗ ಕಡಿಮೆಯಾಗಿತ್ತೇ ? ಅದು ಹೆಚ್ಚಾಗುತ್ತಿದೆಂದು ಸರಕಾರವೇ ಒಪ್ಪಿಕೊಳ್ಳುತ್ತದೆ.

ಚಿಮಿಣಿ ಎಣ್ಣೆ ಉಪಯೋಗಿಸುವವರು ಬಡವರು. ಬಡ ಗುಡಿಸಲುಗಳು ಅಂಧಕಾರದಲ್ಲಿರಬೇಕು. ಬಡವರ ಮಕ್ಕಳು ಅಭ್ಯಾಸ ಮಾಡಬಾರದು. ಅಡಿಗೆ ಅನಿಲ ಶ್ರೀಮಂತರಿಗಷ್ಟೇ ಬೇಕಾಗಿಲ್ಲ ಮಧ್ಯಮ ವರ್ಗದವರಿಗೆ ಅದು ಅಗತ್ಯ. ಪ್ರತ್ಯಕ್ಷ ತೆರಿಗೆ ಹೇರುವುದಿಲ್ಲೆಂದು ಹೇಳುತ್ತೀರಿ. ಪ್ರತ್ಯಕ್ಷ ತೆರಿಗೆ ಶ್ರೀಮಂತರ ಮೇಲೆ ಬೀಳುತ್ತದೆ. ಅಪ್ರತ್ಯಕ್ಷ ತೆರಿಗೆ ಬಡವರ ಮೇಲೆ ಹೇರಲ್ಪಡುತ್ತದೆ. ಶ್ರೀಮಂತರನ್ನು ಉಳಿಸಿ ಬಡವರನ್ನು ಸುಲಿಯುವ ನೀತಿಯನ್ನನುಸರಿಸುತ್ತಿದ್ದೀರೆಂದು ಹೇಳಿ, ಈಗ ರಾಜೀವಗಾಂಧಿ ಸರಕಾರ ನೇರವಾಗಿ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ, ವಿಶ್ವಸಂಸ್ಥೆಯ ಆದೇಶದಂತೆ ವರ್ತಿಸುತ್ತಿದೆಂದೂ ಅಂಥ ಆರ್ಥಿಕ ನೀತಿ ದೇಶದ ಸಾರ್ವಭೌಮತ್ವಕ್ಕೆ ಅಪಾಯಕಾರಿ ಎಂದೂ ಎಚ್ಚರಿಸಿದ್ದಾರೆ.

ಕೇಂದ್ರ ಸರಕಾರದ ಬೆಲೆಏರಿಕೆ ನೀತಿ ವಿರುದ್ಧ ಈಗಾಗಲೇ ಬೇರೆ ಬೇರೆ ರಾಜ್ಯಗಳಲ್ಲಿ ಹಾಗೆಯೇ ದೇಶಾದ್ಯಂತ ಪ್ರತಿಭಟನೆ, ಬಂದ್‌ಗಳು ನಡೆಸಲ್ಪಟ್ಟವೆ ಈ ಹೋರಾಟವನ್ನು ಮುಂದುವರಿಸುವ ನಿರ್ಧಾರವನ್ನು ಎಲ್ಲ ವಿರೋಧ ಪಕ್ಷಗಳೂ ಕೈಗೊಂಡಿವೆ. ಮಾರ್ಚ್ 20 ರಂದು ಪ್ರತಿ ಜಿಲ್ಲೆಯಲ್ಲಿಯೂ ಪ್ರತಿಭಟನೆ ಸಂಘಟಿಸಲ್ಪಡಬೇಕೆಂದು ಕರೆ ಕೊಟ್ಟಿದ್ದಾರೆ.

ಕೇಂದ್ರ ಸರಕಾರದ ಜನ ವಿರೋಧಿ ಬಜೆಟ್. ಬೆಲೆ ಏರಿಕೆ ನೀತಿ ವಿರುದ್ಧ ಪ್ರಚಂಡ ಜನಾಂದೋಲನ ನಡೆಯಲಿ. ರಾಜೀವಗಾಂಧಿ ಸರಕಾರದ ಆರ್ಥಿಕ ನೀತಿ ಬದಲಾಗುವ ತನಕ ಚಳುವಳಿ ಮುನ್ನಡೆಯಲಿ ●

ರೈತ ಸಂಘದ ಸಮ್ಮೇಳನಗಳು

ಅಖಿಲ ಭಾರತ ಕಿಸಾನ ಸಭೆಯ 25ನೆಯ ಸಮ್ಮೇಳನ ಏಪ್ರಿಲ್ ಕೊನೆ ವಾರ ಪಾಟ್ನಾದಲ್ಲಿ ನಡೆಯಲಿವೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮ್ಮೇಳನ ರಾಯಚೂರಿನಲ್ಲಿ ಏಪ್ರಿಲ್ 11ರಿಂದ 13ರ ವರೆಗೆ ಜರುಗಲಿವೆ. ಅದರ ಪೂರ್ವ ಭಾವಿಯಾಗಿ ಬೆಂಗಳೂರು ಜಿಲ್ಲಾ ಸಮ್ಮೇಳನ ಮಾರ್ಚ 23, 24, ರಂದು ಬೆಂಗಳೂರು ದಕ್ಷಿಣ ತಾಲೂಕಿನ ತಲಘಟ್ಟಪುರದಲ್ಲಿಯೂ, ಮಂಗಳೂರು ಜಿಲ್ಲಾ ಸಮ್ಮೇಳನ ಮಾರ್ಚ 30, 31ರಂದು ಮಂಗಳೂರಿಲ್ಲಿಯೂ, ಬಳ್ಳಾರಿ ಜಿಲ್ಲಾ ಸಮ್ಮೇಳನ ಏಪ್ರಿಲ್ 6, 7 ರಂದು ಹರಪನಹಳ್ಳಿಯಲ್ಲಿಯೂ ಜರುಗಲಿವೆ.

ಅರಣ್ಯ ಇಲಾಖೆಯ ಕಚೇರಿಪಿಕೆಟಿಂಗ್

ಇನ್ನೂರು ಜನರ ಬಂಧನ

ಕರ್ನಾಟಕ ಪ್ರಾಂತ ರೈತ ಸಂಘವು ಗಂಗಾವತಿ ತಾಲೂಕಿನಲ್ಲಿ ಭೂರಹಿತ ಕೃಷಿ ಕೂಲಿಗಾರರು ಹತ್ತಾರು ವರ್ಷಗಳಿಂದ ಸಾವಿರಾರು ಎಕರೆ ಸರ್ಕಾರಿ ಪರಂಪರಿತ ಮತ್ತು ಅರಣ್ಯ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ ಈಗ ಅರಣ್ಯ ಅಧಿಕಾರಿಗಳು ಕೇಂದ್ರ ಕಾಂಗ್ರೆಸ್ ಸರ್ಕಾರದ ಆದೇಶದಂತೆ ನೀಲಗಿರಿ ಸಸಿಗಳನ್ನು ನೆಡಸಲೋಸುಗ ರೈತರಿಂದ ಭೂಮಿಯನ್ನು ಕಸಿದುಕೊಂಡು ತೆಗ್ಗುಗಳನ್ನು ತೋಡುತ್ತಿದ್ದಾರೆ.

ಸಾವಿರಾರು ಟನ್ ನೀಲಗಿರಿ ಗಿಡಗಳನ್ನು ಬಿರ್ಲಾರ ಕಂಪನಿಗೆ ಕಳಿಸಲು ಒಪ್ಪಿರುವ ಶ್ರೀ ಮಾನ್ ರಾಜೀವ ಗಾಂಧಿ, ದೇಶದಲ್ಲಿರುವ ಒಟ್ಟು ಭೂಮಿಯ 2/2 ಭಾಗ ಕೇವಲ ಶೇಕಡ 5ರಷ್ಟಿರುವ ಭೂಮಾಲಿಕರ ಕೈಯಲ್ಲಿರುವುದರಿಂದ ಅಂತವರ ಭೂಮಿಯಲ್ಲಿ ನೀಲಗಿರಿ ಸಸಿಗಳನ್ನು ಹಾಕದೇ ಭೂಮಿಯು ಜೀವನಕ್ಕೆ ಆಧಾರವಾಗಿರುವ ಸಾವಿರಾರು ರೈತ ಕೂಲಿಕಾರರನ್ನು ಒಕ್ಕಲೆಬ್ಬಿಸುತ್ತಾರೆ.

ಕೇಂದ್ರ ಕಾಂಗ್ರೆಸ್ ಸರ್ಕಾರದ ರೈತ-ಕೂಲಿಕಾರರ ವಿರೋಧಿ ನೀತಿಯನ್ನು ಪ್ರತಿಭಟಿಸಿ ಸ್ಥಳೀಯ ಕರ್ನಾಟಕ ಪ್ರಾಂತ ರೈತ ಸಂಘವು ಮೆರವಣಿಗೆ ಮೂಲಕ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಅರಣ್ಯ ಇಲಾಖೆಯನ್ನು ಪಿಕೆಟಿಂಗ್ ಮಾಡಲು ಯತ್ನಿಸಿದಾಗ ಪೋಲೀಸರು ಸುಮಾರು 200 ರೈತರನ್ನು ಬಂಧಿಸಿ ನಂತರ 5-30 ಕ್ಕೆ ಬಿಡುಗಡೆ ಮಾಡಿದರು ಸಾಯಂಕಾಲ 6 ಗಂಟೆಗೆ ನಗರದ ಗಾಂಧಿ ಚೌಕಿನ ಬಳಿ ಕರ್ನಾಟಕ ಪ್ರಾಂತ ರೈತ ಸಂಘವು ಬಹಿರಂಗ ಸಭೆಯನ್ನು ಏರ್ಪಡಿಸಿ ಕೇಂದ್ರ ಸರ್ಕಾರದ ರೈತ ಕೂಲಿಕಾರರ ವಿರೋಧಿ ಧೋರಣೆಯನ್ನು ಖಂಡಿಸಿತು. ನಂತರ ಇನ್ನು ಮುಂದೆ ರೈತ ಕೂಲಿ ಕೂಲಿಕಾರರ ಭೂಮಿಯಲ್ಲಿ ತೆಗ್ಗುಗಳನ್ನು ತೋಡಲು ಅರಣ್ಯ ಇಲಾಖೆ ಪ್ರಯತ್ನಿಸಿದ್ದೇ ಆದರೆ ಒಗ್ಗಟ್ಟಿನಿಂದ ಎದೆಗಟ್ಟಿ ಬೇಕು ಹಾಗೂ ಈಗಾಗಲೇ ತೋಡಿರುವ ತಗ್ಗುಗಳನ್ನು ಮುಚ್ಚಬೇಕೆಂದು ರೈತಕೂಲಿಕಾರರಿಗೆ ಶ್ರೀ ಬಸವರಾಜ ಕೆ, ಶ್ರೀ ಕರಿಯಪ್ಪ ಹುಡೆಜಾಲಿಯವರು ಬಹಿರಂಗ ಸಭೆಯಲ್ಲಿ ಕರೆ ಕೊಟ್ಟರು.

ವಾರಲಿ ಆದಿವಾಸಿಗಳ ಮಹಾನ್ ಹೋರಾಟ

ಮಹಾರಾಷ್ಟ್ರದ ವಾರಲಿಯ ಆದಿವಾಸಿಗಳು 1945–46 ರಲ್ಲಿ ತಮ್ಮ ಮೇಲಿನ ಗುಲಾಮಿ ಶೋಷಣೆಯ ವಿರುದ್ಧ ನಡೆಸಿದ ಮಹಾನ್ ಹೋರಾಟ ಅಖಿಲಭಾರತ ಕಿಸಾನ್ ಸಭೆಯ ನೇತೃತ್ವದಲ್ಲಿ ನಡೆಸಲಾದ ಹೋರಾಟಗಳಲ್ಲಿ ಅತ್ಯಂತ ಮಹತ್ವಪೂರ್ಣವಾದದ್ದು. ಟೈಮ್ಸ್ ಆಫ್ ಇಂಡಿಯಾದ ಜನವರಿ 6, 1947ರ ಸಂಚಿಕೆಯಲ್ಲಿ ವರ್ಣಿಸಲಾಗಿರುವಂತೆ ಈ ಹೋರಾಟದಲ್ಲಿ 'ಭೂಮಾಲೀಕರು ಮತ್ತು ಆದಿವಾಸಿ ಒಕ್ಕಲುಗಳ ನಡುವೆ ವಸ್ತುಶಃ ಒಂದು ಯುದ್ಧವೇ ನಡೆದಿತ್ತು.' "ಮುಂಬಯಿ ಸಂಸ್ಥಾನದ ಥಾನಾ ಜಿಲ್ಲೆಯ ದಟ್ಟ ಅರಣ್ಯದ ನಡುವೆ ವಾರಲೀಯರ ಈ ಬಂಡಾಯವನ್ನು ಒಬ್ಬ ಕಮ್ಯುನಿಸ್ಟ್ ಮಹಿಳೆ ಮುನ್ನಡೆಸುತ್ತಿದ್ದಾಳೆ" ಎಂದು ಆಸ್ಟ್ರೇಲಿಯಾದ ಡೇಲಿ ಟೆಲಿಗ್ರಾಫ್ ಪತ್ರಿಕೆಯ ವರದಿಗಾರ ಮೈಕೆಲ್ ಬ್ರೌನ್ ಬರೆದಿದ್ದರು.

ವಾರಲೀಯರು 1945 ರಲ್ಲಿ ತಮ್ಮ ಬದುಕಿನಲ್ಲೇ ಮೊತ್ತಮೊದಲ ಬಾರಿಗೆ ಬಂಡೇಳುವುದರ ಮೂಲಕ ಶತಮಾನಗಳ ಕಾಲ ತಮ್ಮ ಮೇಲೆ ನಡೆದಿದ್ದ ದಾಸ್ಯ ಪದ್ಧತಿಯ ಶೋಷಣೆಯನ್ನು ಪ್ರತಿಭಟಿಸಿದರು. ಈ ಹೋರಾಟದಲ್ಲಿ ಅವರು ಮಾಡಿದ ಬಲಿದಾನ ಅಪಾರ.

ಹಿನ್ನೆಲೆ

ಮಹಾರಾಷ್ಟ್ರದ ದಹಾಣು, ತಲಸಾರಿ, ಜೌಹರ್, ವಾಡಾ, ಮೊಖಾಡಾ ಮತ್ತು ಪಾಲಗಾರ್ ಮುಂತಾದ ತಾಲೂಕುಗಳನ್ನೊಳಗೊಂಡ ಥಾನಾ ಜಿಲ್ಲೆ ಹಚ್ಚ ಹಸಿರು ದಟ್ಟ ಕಾಡು ಮತ್ತು ಪರ್ವತಗಳಿಂದ ಆವೃತವಾದ ಪ್ರದೇಶ. ಇಲ್ಲಿ ವಾಸಿಸಿದ್ದ ಐದು ಲಕ್ಷ ಜನರಲ್ಲಿ ಬಹುಸಂಖ್ಯಾತರು ವಾರಲಿ ಆದಿವಾಸಿಗಳು. ಸುಮಾರು ನೂರಿಪ್ಪತ್ತೈದು ವರ್ಷಗಳ ಹಿಂದೆ ಈ ಗುಡ್ಡಗಾಡು ಪ್ರದೇಶ ಮತ್ತು ಅರಣ್ಯಗಳ ಸಂಪೂರ್ಣ ಒಡೆತನ ಇದ್ದದ್ದು ಈ ಆದಿವಾಸಿಗಳ ಕೈಯ್ಯಲ್ಲೇ. ಬ್ರಿಟಿಷ್ ಆಡಳಿತೆಯ ಆರಂಭದೊಂದಿಗೆ ಈ ಒಡೆತನ ಹೊಸ ಭೂಮಾಲೀಕರ ಕೈಸೇರಿತು. ಹೊಸದಾಗಿ ಒಡೆತನ ಹೊಂದಿದ ಭೂಮಾಲಕರು ಮುಗ್ಧ ಆದಿವಾಸಿಗಳನ್ನು ವಂಚಿಸುವ ಸಲುವಾಗಿ ಪಾಳು ಬಿದ್ದಿದ್ದ ಭೂಮಿಯಲ್ಲಿ ಒಂದು ಭಾಗವನ್ನು ಅವರಿಗೆ ನೀಡಿ ಅದಕ್ಕೆ ಪ್ರತಿಫಲವಾಗಿ ಅವರಿಂದ ಬಲವಂತದ ಬಿಟ್ಟಿ ದುಡಿಮೆ ಮಾಡಿಸುತ್ತಿದ್ದರು. ಆದಿವಾಸಿಗಳು ಕಾಡಿನಿಂದ ಮರಮಟ್ಟುಗಳನ್ನು ಕಡಿದು ಮುಫತ್ತಾಗಿ ಭೂಮಾಲೀಕರಿಗೆ ಸರಬರಾಜು ಮಾಡಬೇಕಾಗಿತ್ತು, ಹತ್ತಿಪ್ಪತ್ತು ಮೈಲು ದೂರ ನಡೆದು ಭೂಮಾಲೀಕರಿಗೆ ಹಾಲು ಸರಬರಾಜು ಮಾಡಬೇಕಾಗಿತ್ತು. ಬಿಟ್ಟಿ ಮನೆ ಕೆಲಸ, ಶೌಚಾಲಯಗಳ ಶುದ್ಧಿ ಮಾಡಬೇಕಾಗಿತ್ತಲ್ಲದೆ ಆದಿವಾಸಿ ಮಹಿಳೆಯರು ಭೂಮಾಲೀಕರ ಮತ್ತು ಅವರ ಅತಿಥಿಗಳ ಲೈಂಗಿಕ ತೃಷೆಯನ್ನು ಹಿಂಗಿಸಬೇಕಾಗಿತ್ತು. ಈ ಪ್ರದೇಶದ ಆಡಳಿತ, ಕೋರ್ಟು ಕಚೇರಿ ಇವೆಲ್ಲ ಭೂಮಾಲೀಕರ ಕೈಗೊಂಬೆಗಳಾಗಿದ್ದವು, ಕೊಲೆ, ಸುಲಿಗೆ ಮಾನಭಂಗಗಳನ್ನು ಒಳಗೊಂಡಂತೆ ಆದಿವಾಸಿಗಳ ಮೇಲೆ ಭೂಮಾಲೀಕರ ಪೈಶಾಚಿಕ ದಬ್ಬಾಳಿಕೆ ಅವ್ಯಾಹತವಾಗಿತ್ತು.

ಕಿಸಾನ್ ಸಭೆಯ ಪ್ರವೇಶ

ಆದಿವಾಸಿಗಳ ನಡುವೆ ಕಿಸಾನ್ ಸಭೆ ತನ್ನ ಕಾರ್ಯವನ್ನು ಪ್ರಾರಂಭಿಸುವ ಮೊದಲು ಮುಂಬಯಿ ಸಂಸ್ಥಾನದ ಪ್ರಧಾನಿಯಾಗಿದ್ದ ಬಿ. ಜಿ. ಖೇರ್ ಅವರ ನೇತೃತ್ವದ 'ಆದಿವಾಸಿ ಸೇವಾ ಮಂಡಲ' ವೆಂಬ ಕಾಂಗ್ರೆಸ್ ಸಂಸ್ಥೆ ಈ ಪ್ರದೇಶದಲ್ಲಿ ಭೂಮಾಲೀಕರ ಮನ ಪರಿವರ್ತನೆ ಮಾಡುವ ಮೂಲಕ ದಾಸ್ಯ ಪದ್ಧತಿಯನ್ನು ಕೊನೆಗಾಣಿಸಲು ಪ್ರಯತ್ನಿಸುತ್ತಿತ್ತು. ಆದರೆ ಈ ಸಂಸ್ಥೆಯ ಸೋಗಿನ ಕಾರ್ಯಕ್ರಮದಿಂದ ದಾಸ್ಯಪದ್ಧತಿ ಕೊನೆಗಾಣಲಿಲ್ಲ. ಅದಕ್ಕಾಗಿ ಸಮರಶೀಲ ಸಂಘಟನೆಯೊಂದರ ಅಗತ್ಯವಿತ್ತು. ಅಖಿಲ ಭಾರತ ಕಿಸಾನ್ ಸಭಾ ಈ ಅವಶ್ಯಕತೆಯನ್ನು ಪೂರೈಸಿತಲ್ಲದೆ ಆದಿವಾಸಿಗಳ ಕೈಯಲ್ಲಿ ಹೋರಾಟದ ಪ್ರಬಲ ಅಸ್ತ್ರವಾಯಿತು. ಆದಿವಾಸಿಗಳು ಬಂಡಾಯದ ಬಾವುಟವೆತ್ತಿದ್ದು ಅಖಿಲ ಭಾರತ ಕಿಸಾನ್ ಸಭೆಯ ನೇತೃತ್ವದಲ್ಲೇ.

ಥಾನಾ ಜಿಲ್ಲೆಯ ತಿತ್ವಾಲದಲ್ಲಿ ನಡೆದ ಮಹಾರಾಷ್ಟ್ರ ಪ್ರಾಂತ ಕಿಸಾನ್ ಸಮ್ಮೇಳನದಲ್ಲಿ ತಲಸಾರಿ ತಾಲೂಕಿನ ಹದಿನೈದು ಮಂದಿ ಆದಿವಾಸಿಗಳು ಭಾಗವಹಿಸಿದರು. ಈ ಸಮ್ಮೇಳನ ಆದಿವಾಸಿಗಳನ್ನು ಸಂಪೂರ್ಣವಾಗಿ ಬದಲಾಯಿಸಿತು. ಸಮ್ಮೇಳನದಿಂದ ಹಿಂದಿರುಗುವಾಗ ಈ ಆದಿವಾಸಿಗಳು ತಮ್ಮೊಂದಿಗೆ ಕೆಂಬಾವುಟಗಳನ್ನು ಒಯ್ದಿದ್ದರು. ಕೆಂಬಾವುಟ ಈ ಜನರ ಪಾಲಿಗೆ ಆತ್ಮವಿಶ್ವಾಸದ ಪ್ರತೀಕವಾಯಿತು. ದಾಸ್ಯ ಪದ್ಧತಿಯನ್ನು ಹೊಡೆದೋಡಿಸುವಲ್ಲಿ ಕೆಂಬಾವುಟವೇ ತಮ್ಮ ಮಿತ್ರ ಮತ್ತು ಮಾರ್ಗದರ್ಶಿ ಎಂಬುದನ್ನು ಅರಿತ ಆದಿವಾಸಿಗಳು ಕೆಂಬಾವುಟಕ್ಕಾಗಿ ಪ್ರಾಣ ನೀಡಲೂ ಮುಂದಾದರು. ಕೆಂಬಾವುಟದೊಂದಿಗೆ ಹಳ್ಳಿ ಹಳ್ಳಿ ಸುತ್ತಿದ ಈ ಸಂಗಾತಿಗಳು ದಾಸ್ಯಪದ್ಧತಿಯನ್ನು ಕೊನೆಗಾಣಿಸುವುದು ಸಾಧ್ಯವೆಂಬ ಸಂದೇಶವನ್ನು ಪ್ರತಿಯೊಬ್ಬ ಆದಿವಾಸಿಯ ಹೃದಯದಲ್ಲೂ ಬಿತ್ತಿದರು. ಈ ಸಂದೇಶ ಇಡೀ ತಲಸಾರಿ ತಾಲೂಕಿನಲ್ಲಿ ಪ್ರತಿಧ್ವನಿಸಿತು.

ವಾರಲಿ ಸಮ್ಮೇಳನ

ಕಿಸಾನ್ ಸಭೆಯ ಆಶ್ರಯದಲ್ಲಿ ಮೇ, 23 1945ರಂದು ಝರಿ ಗ್ರಾಮದಲ್ಲಿ ನಡೆದ ವಾರಲೀ ಸಮ್ಮೇಳನ ಈ ದಿಸೆಯಲ್ಲಿ ಮಹತ್ವ ಪೂರ್ಣವಾದದ್ದು, ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಕಾ. ದಳವಿ ಮತ್ತು ಕಾ. ಗೋದಾವರಿ ಪರುಳೇಕರ್ ದಟ್ಟಕಾಡಿನ ನಡುವೆ ಇದ್ದ ಆದಿವಾಸಿಗಳ ಹಳ್ಳಿಗಳನ್ನು ಸಂದರ್ಶಿಸಿ ಅವರಿಗೆ ನೀಡಿದ ಉತ್ತೇಜನದ ಪರಿಣಾಮವಾಗಿ ಆದಿವಾಸಿಗಳಲ್ಲಿ ನವಚೈತನ್ಯ ಹರಿಯಲಾರಂಭಿಸಿತು. ಕಾ. ದಳವಿ ಮತ್ತು ಕಾ. ಗೋದಾವರಿ ಅವರನ್ನು ಆದಿವಾಸಿಗಳು ತಮ್ಮವರೇ ಎಂಬುದಾಗಿ ತಿಳಿದುಕೊಳ್ಳಲಾರಂಭಿಸಿದರು. ವಾರಲೀ ಸಮ್ಮೇಳನಕ್ಕೆ ಐದು ಸಾವಿರ ಆದಿವಾಸಿಗಳು ಪ್ರತಿನಿಧಿಗಳಾಗಿ ಬಂದಿದ್ದರೆ ಅವರಲ್ಲಿ ಐದು ನೂರು ಮಂದಿ ಮಹಿಳೆಯರು. ಈ ಸಮ್ಮೇಳನದ ದಿನದಿಂದ ಇಂದಿನ ತನಕವೂ ವಾರಲೀ ಮಹಿಳೆಯರು ತಮ್ಮ ಪುರುಷರ ಜೊತೆ ಎಲ್ಲ ಹೋರಾಟಗಳಲ್ಲೂ ಸಮ ಭಾಗಿಗಳಾಗಿದ್ದಾರೆ.

ಐದಂಶಗಳ ಕಾರ್ಯಕ್ರಮ

ಅತ್ಯಂತ ಯಶಸ್ವಿಯಾಗಿ ನಡೆದ ಈ ಸಮ್ಮೇಳನ ದಾಸ್ಯ ಪದ್ಧತಿಯನ್ನು ಕೊನೆಗಾಣಿಸುವ ನಿಟ್ಟಿನಲ್ಲಿ ಮಹತ್ವದ ತೀರ್ಮಾನಗಳನ್ನು ಕೈಗೊಂಡಿತಲ್ಲದೆ ಐದಂಶದ ಕಾರ್ಯಕ್ರಮವೊಂದನ್ನು ರೂಪಿಸಿಕೊಂಡಿತು. ಒಂದು ರೂಪಾಯಿ ಹನ್ನೆರಡಾಣೆ ದಿನಗೂಲಿ ಸಿಗದೆ ಭೂಮಾಲೀಕರ ಭೂಮಿಯನ್ನು ಉಳುವುದಿಲ್ಲ, ಭೂಮಾಲೀಕರಿಗೆ ಬಿಟ್ಟಿಚಾಕರಿ ಮಾಡುವುದಿಲ್ಲ, ಭೂಮಾಲೀಕ ದೈಹಿಕ ಆಕ್ರಮಣ ಮಾಡಿದರೆ ಅವನನ್ನು ಎದುರಿಸು; ಭೂಮಾಲೀಕರನ್ನು ಗುಂಪಾಗಿ ಎದುರಿಸು, ಒಂಟಿಯಾಗಿ ಅಲ್ಲ, ಮತ್ತು ಆದಿವಾಸಿಗಳೆಲ್ಲ ಒಂದಾಗಬೇಕು, ಇವೇ ಆ ಐದಂಶದ ಕಾರ್ಯಕ್ರಮಗಳು

ಬಿಟ್ಟಿ ಬೇಗಾರಿಯನ್ನು ಝರಿ ಸಮ್ಮೇಳದಲ್ಲಿ ಮಣ್ಣು ಮುಕ್ಕಿಸಲಾಗಿದೆ ಎಂಬ ಘೋಷಣೆ ಕೂಗುತ್ತಾ ಪ್ರತಿನಿಧಿಗಳು ತಮ್ಮ ಹಳ್ಳಿಗೆ ವಾಪಸಾದರು. ಸಮ್ಮೇಳನದ ಸಂದೇಶ ಹಳ್ಳಿ ಹಳ್ಳಿಗಳಲ್ಲಿ ಧ್ವನಿಸಿ ಆದಿವಾಸಿಗಳ ಉತ್ಸಾಹವನ್ನು ಬಡಿದೆಬ್ಬಿಸಿತು. ಕೆಲವೇ ವಾರಗಳಲ್ಲಿ ಬಲವಂತದ ಬಿಟ್ಟಿ ದುಡಿಮೆ ಸಂಪೂರ್ಣ ನಿಂತು ಹೋಯಿತಲ್ಲದೆ ಈ ತನಕವೂ ಆದಿವಾಸಿಗಳನ್ನು ಹೊಡೆದು ಬಡಿದು ದಮನಿಸುತಿದ್ದ ಭೂಮಾಲೀಕರು ವಿಸಿರಿತ್ರದಂತಾಯಿತು. ತಲಸಾರಿ ತಾಲೂಕಿನ ಆದಿವಾಸಿಗಳ ಯಶಸ್ವಿನಿಂದ ಉತ್ತೇಜಿತರಾದ ದಹಾಣು ಗ್ರಾಮದ ಆದಿವಾಸಿಗಳು ಹೋರಾಟಕ್ಕೆ ಮುಂದಾದರು. ಹೋರಾಟ ಸುತ್ತಮುತ್ತಲ ತಾಲೂಕುಗಳಿಗೂ ವ್ಯಾಪಿಸಿ ಭೂಮಾಲೀಕರು ತತ್ತರಿಸುವಂತಾಯಿತು.

ಹೋರಾಟದ ಸಮಯದಲ್ಲಿ ಆದಿವಾಸಿಗಳು ನಡೆಸಿದ ಸಭೆಗಳೂ ವೈಶಿಷ್ಟ್ಯಪೂರ್ಣ. ಹಲವುವೇಳೆ ಕಿಸಾನ್ ಸಭಾ ಕಾರ್ಯಕರ್ತರಿಗೂ ಕಾಯದೆ ಆದಿವಾಸಿಗಳು ಸ್ವಯಂಪ್ರೇರಿತರಾಗಿ ಸಭೆ ನಡೆಸುದ್ದರು, ಇವರಲ್ಲಿ ಯಾರೂ ವಾಗ್ಮಿಗಳಲ್ಲ. ಝರಿ ಸಮ್ಮೇಳನದ ಕಾರ್ಯಕ್ರಮಗಳನ್ನು ಹಲವು ಸಾರಿ ಕೂಗಿ ಹೇಳುವುದೇ ಅವರು ಮಾಡುತಿದ್ದ ಭಾಷಣವಾಗಿದ್ದರೂ ಈ ಸಭೆಗಳು ಹೊಮ್ಮಿಸಿದ ಉತ್ಸಾಹ ಅಪೂರ್ವವಾದದ್ದು.

ಜೀತ ಪದ್ಧತಿಯ ನಿರ್ಮೂಲನ

ಬಿಟ್ಟಿ ಬೇಗಾರಿಯನ್ನು ಯಶಸ್ವಿಯಾಗಿ ನಿಲ್ಲಿಸಿದ ಆದಿವಾಸಿಗಳು ಅಷ್ಟರಿಂದಲೇ ತೃಪ್ತರಾಗದೇ ಭೂಮಾಲೀಕರ ಸಾಲಕ್ಕೆ ಕಟ್ಟುಬಿದ್ದು ಜೀತದಾಳುಗಳಾಗಿರುವವರ ವಿಮೋಚನೆಗೂ ಮುಂದಾದರು. ಸಾಲಕ್ಕಾಗಿ ಜೀತದಾಳುಗಳಾಗಿರುವವರ ಸಮಸ್ಯೆ ದಹಾಣು ತಾಲೂಕಿನಲ್ಲಿ ತೀವ್ರವಾಗಿದ್ದಿತು. ಅಖಿಲ ಭಾರತ ಕಿಸಾನ್ ಸಭೆ ಮತ್ತು ಕಾ. ಗೋದಾವರಿ ಪರುಳೇಕರ್ ಅವರು ವಿಚಾರ ವಿಮರ್ಶೆ ನಡೆಸಿ ನೀಡಿದ ಸಲಹೆಯ ಮೇಲೆ ಸಾಲದ ಜೀತದಾಳುಗಳ ವಿಮೋಚನೆಗಾಗಿ ಹೋರಾಟವೊಂದನ್ನು 1945ರ ನವಂಬರ್ ಏಳರಂದು ಪ್ರಾರಂಭಿಸುವುದೆಂದು ನಿರ್ಧರಿಸಲಾಯಿತು

ಕಿಸಾನ್ ಸಭೆಯ ಕಾರ್ಯಕರ್ತರು ಈ ಹೋರಾಟವನ್ನು ಪ್ರಾರಂಭಿಸಬೇಕಾಗಿತ್ತಾದರೂ ಆದಿವಾಸಿಗಳು ಅದಕ್ಕಾಗಿ ಕಾಯದೆ ಅಖರ್‌ಪಟ್ ಮತ್ತು ನರಪಾಡ್ ಹಳ್ಳಿಗಳಲ್ಲಿ ಎರಡು ಬೃಹತ್ ಸಭೆಗಳನ್ನು ಏರ್ಪಡಿಸಿದರು. ಸುಮಾರು ಆರು ಸಾವಿರ ಜನ ಭಾಗವಹಿಸಿದ್ದ ಈ ಸಭೆಗಳಲ್ಲಿ ಸಾಲದ ಜೀತಗಾರರನ್ನು ಬಿಡುಗಡೆಗೊಳಿಸುವ ತೀರ್ಮಾನವನ್ನು ಕೈಗೊಳ್ಳಲಾಯಿತು. ಆ ವಿಮೋಚನಾ ಹೋರಾಟವೂ ಅತ್ಯಂತ ವೈಶಿಷ್ಟ್ಯಪೂರ್ಣವಾಗಿದೆ. ಆದಿವಾಸಿಗಳು ತಂಡತಂಡವಾಗಿ ಕೈಯ್ಯಲ್ಲಿ ಕೆಂಬಾವುಟ ಹಿಡಿದುಕೊಂಡು ಮೆರವಣಿಗೆಯಲ್ಲಿ ಸಾಗುತ್ತಿದ್ದರು, ಮೆರವಣಿಗೆ ಭೂಮಾಲೀಕನೊಬ್ಬನ ಮನೆಬಾಗಿಲಿಗೆ ಬರುತ್ತಲೇ ಆ ಮನೆಯಲ್ಲಿ ಜೀತಕ್ಕಿರುವ ಸಾಲಗಾರರ ಹೆಸರು ಎತ್ತಿ ಕೂಗಲಾಗುತಿತ್ತು. ಸಾಲಗಾರ ಇನ್ನು ಮುಂದೆ ಸ್ವತಂತ್ರನೆಂದೂ ಕೆಂಬಾವುಟದ ಹೆಸರಲ್ಲಿ ಸಾರಿಹೇಳಲಾಗುತಿತ್ತು. ಅಷ್ಟರಲ್ಲೇ ಮನೆಯೊಳಗಿನಿಂದ ಜೀತದಾಳು ತನ್ನ ಹೆಂಡತಿ ಮಕ್ಕಳು ಮತ್ತು ಗಂಟುಮೂಟೆಯೊಂದಿಗೆ ಹೊರಬಂದು ಮೆರವಣಿಗೆಯಲ್ಲಿ ಸೇರಿಕೊಳ್ಳುತಿದ್ದ. ಜೀತದಾಳುಗಳನ್ನು ತಡೆಯುವ ಧೈರ್ಯ ಯಾವ ಜಮೀನುದಾರನಿಗೂ ಇರಲಿಲ್ಲ. ಮೂರು ದಿನಗಳು ನಿರಂತರವಾಗಿ ನಡೆದ ಈ ವಿಮೋಚನಾ ಕಾರ್ಯಕ್ರಮದಲ್ಲಿ ಒಂದು ಸಾವಿರಕ್ಕೂ ಮಿಕ್ಕಿ ಜೀತದಾಳುಗಳು ಬಿಡುಗಡೆ ಹೊಂದಿದ್ದಲ್ಲದೆ ಅವರ ಹೆಂಡತಿಯರೂ ಭೂಮಾಲೀಕರ ಕಾಮ ಪಿಪಾಸೆಯಿಂದ ವಿಮೋಚನೆ ಹೊಂದುವಂತಾಯಿತು.

ಕಿಸಾನ್ ಸಭೆಯ ಪಾತ್ರ

ಬಿಟ್ಟಿದುಡಿಮೆ ಮತ್ತು ಜೀತಗಾರಿಕೆಯ ವಿರುದ್ಧ ಯಶಸ್ವಿಯಾಗಿ ಸೆಣಸಿದ ಆದಿವಾಸಿಗಳ ಹೋರಾಟ ಕ್ರಾಂತಿಕಾರಿ ಸ್ವರೂಪದ ಚಳವಳಿಯಾಗಿತ್ತು.

ಅಕ್ಟೋಬರ್, 1945 ರಲ್ಲಿ ಈ ಕ್ರಾಂತಿಕಾರಿ ಹೋರಾಟದ ಎರಡನೇ ಹಂತ ಪ್ರಾರಂಭವಾಯಿತು ಭೂಮಾಲೀಕರ ವಿಶಾಲವಾದ ಹುಲ್ಲುಗಾವಲಿನಲ್ಲಿ ಹುಲ್ಲು ಕುಯ್ಯುವುದಕ್ಕೆ ಪ್ರತಿ ಐದುನೂರು ಪೌಂಡು ಹುಲ್ಲಿಗೆ 2-50 ರೂಪಾಯಿ ಕನಿಷ್ಟ ಕೂಲಿ ಸಿಗಬೇಕೆಂಬ ಕಿಸಾನ್ ಸಭೆಯ ಬೇಡಿಕೆಯ ಆಧಾರದಲ್ಲಿ ಆದಿವಾಸಿಗಳು ಮುಷ್ಕರ ಪ್ರಾರಂಭಿಸಿದರು. ಪಶುಗಳಿಗೆ ಮೇವಾಗಿದ್ದ ಈ ಹುಲ್ಲಿಗೆ ಮುಂಬಯಿ ನಗರದಲ್ಲಿ ವಿಶೇಷ ಬೇಡಿಕೆ ಇತ್ತು. ಭೂಮಾಲಕರು ಈ ಕನಿಷ್ಟ ಕೂಲಿಗೆ ಒಪ್ಪಿಕೊಳ್ಳದ ಕಾರಣ ತಲಸಾರಿ ಮತ್ತು ದಹಾಣು ತಾಲೂಕಿನ ಆದಿವಾಸಿಗಳು ಹುಲ್ಲು ಕುಯ್ಯಲು ಸುತರಾಂ ಒಪ್ಪಲಿಲ್ಲ. ಈ ತನಕ ಬಲವಂತದ ಬಿಟ್ಟಿ ದುಡಿಮೆಯ ಮೂಲಕ ಹುಲ್ಲು ಕುಯ್ಯಿಸುತಿದ್ದ ಭೂಮಾಲಕರಿಗೆ ಕನಿಷ್ಟ ಕೂಲಿಯಿಲ್ಲದೆ ಕೊಯ್ಲು ಮಾಡಲು ಒಬ್ಬ ಆದಿವಾಸಿಯೂ ಸಿಗದೆ ಮುಷ್ಕರ ನೂರಕ್ಕೆ ನೂರರಷ್ಟು ಯಶಸ್ವಿಯಾಯಿತು. ಭೂಮಾಲಕರ ಬಗೆಬಗೆಯ ಬೆದರಿಕೆ ಮತ್ತು ಒತ್ತಡಕ್ಕೂ ಆದಿವಾಸಿಗಳು ಮಣಿಯಲಿಲ್ಲ.

ಮುಷ್ಕರದ ಯಶಸ್ಸಿನಿಂದ ಹತಾಶಗೊಂಡ ಭೂಮಾಲಕರು ಪಿತೂರಿ ನಡೆಸಲಾರಂಭಿಸಿದರು. ಗೋದಾವರಿ ಪರುಳೇಕರ್ ತಲವಾಡಕ್ಕೆ ಬರುವರೆಂದೂ, ಅಲ್ಲಿ ಆದಿವಾಸಿಗಳ ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡುವರೆಂದೂ ಈ ಸಭೆಗೆ ಆದಿವಾಸಿಗಳೆಲ್ಲರೂ ತಮ್ಮಲ್ಲಿರುವ ಎಲ್ಲ ಬಗೆಯ ಆಯುಧಗಳಿಂದ ಸಜ್ಜಿತರಾಗಿ ಬರಬೇಕೆಂದೂ ಕೆಂಬಾವುಟದ ಆದೇಶ ಎಂಬುದಾಗಿ ಭೂಮಾಲಕರು ಸುಳ್ಳು ಪ್ರಚಾರ ಮಾಡಿದರು ಅದರೊಂದಿಗೇ ಆದಿವಾಸಿಗಳು ಶಸ್ತ್ರಸಜ್ಜಿತರಾಗಿ ಭೂಮಾಲಕರ ಮೇಲೆ ಧಾಳಿ ಮಾಡಲು ಬರುತ್ತಿರುವರೆಂದು ಪೋಲೀಸರಿಗೂ ಭೂಮಾಲಕರು ಸುದ್ದಿ ನೀಡಿದರು. ಅನಾರೋಗ್ಯದಿಂದ ಬಳಲುತ್ತಿದ್ದ ಗೋದಾವರಿ ಅವರಿಗೆ ಈ ವಿಚಾರ ತಿಳಿದಿರಲೇ ಇಲ್ಲ.

ಸಭೆಗೆ ಬಂದ ಆದಿವಾಸಿಗಳ ಮೇಲೆ ಭೂಮಾಲಕರು ತಮ್ಮ ಗೂಂಡಾಗಳನ್ನು ಛೂ ಬಿಟ್ಟು ಹಿಂಸೆಯನ್ನು ಪ್ರಚೋದಿಸಿದರು ಅಷ್ಟರಲ್ಲೇ ಪ್ರತ್ಯಕ್ಷವಾದ ಪೋಲೀಸ್ ಪಡೆ ಶಾಂತರಾಗಿದ್ದ ಆದಿವಾಸಿಗಳ ಮೇಲೆ ಮೂರು ಸುತ್ತು ಗುಂಡು ಹಾರಿಸಿತು.

ಪೋಲೀಸರು ಕೆಂಬಾವುಟದ ಮೇಲೆ ಗುಂಡು ಹಾರಿಸುತ್ತಾರೆ ಎಂದು ಭಾವಿಸಿದ್ದ ಮುಗ್ಧ ಆದಿವಾಸಿಗಳು ಆ ಕರಾಳ ರಾತ್ರಿಯಲ್ಲಿ ಕೆಂಬಾವುಟದ ಸುತ್ತ ಕೋಟೆ ಕಟ್ಟಿ ನಿಂತರು. ಹದಿನೈದು ಗಂಟೆಗಳ ಕಾಲ ಈ ಜನ ಕೆಂಬಾವುಟವನ್ನು ಕಾಪಾಡಿದರು. ಗೋಲಿಬಾರಿನಲ್ಲಿ ಐದು ಆದಿವಾಸಿಗಳು ಸತ್ತರಲ್ಲದೆ ಅನೇಕ ಮಂದಿ ಗಾಯಗೊಂಡರು

ಪೋಲೀಸ್ ಗೋಲಿಬಾರಿನ ಕುರಿತು ನ್ಯಾಯಾಂಗ ತನಿಖೆ ನಡೆಯ ಬೇಕೆಂಬ ಕಿಸಾನ್ ಸಭೆಯ ಬೇಡಿಕೆಯನ್ನು ಸಾಮ್ರಾಜ್ಯಶಾಹಿ ಸರಕಾರ ತಳ್ಳಿ ಹಾಕಿ ತಲ್ಲದೆ ವಾರಲಿಗಳ ಮೇಲೆ ತನ್ನ ದಬ್ಬಾಳಿಕೆಯನ್ನು ಇನ್ನಷ್ಟು ಹರಿಯಗೊಟ್ಟಿತು. ಕಾಂಗ್ರೆಸ್‌ನ ಆದಿವಾಸಿ ಸೇವಾ ಸಮಿತಿ ಗೋಲಿಬಾರನ್ನು ಖಂಡಿಸುವ ಗೋಜಿಗೆ ಹೋಗದೆ ವಾರಲೀಯರ ಚಳುವಳಿಯನ್ನು ದೂಷಿಸಲಾರಂಭಿಸಿತು. ಕಾ. ಎಸ್. ವಿ. ಪರುಳೇಕರ್, ಗೋದಾವರಿ ಪರುಳೇಕರ್ ಮತ್ತು ಮೂವರು ಕಾರ್ಯಕರ್ತರನ್ನೂ ಥಾನಾ ಜಿಲ್ಲೆಯಿಂದಗಡೀಪಾರು ಮಾಡಲಾಯಿತು ಹಲವಾರು ವಾರಗಳ ಕಾಲ ನಡೆದ ಬಂಧನ ಕ್ರಮಗಳಲ್ಲಿ ಸಾವಿರ ಮಂದಿ ಆದಿವಾಸಿಗಳನ್ನು ದಸ್ತಗಿರಿ ಮಾಡಲಾಯಿತು.

ದಬ್ಬಾಳಿಕೆ, ಗೋಲಿಬಾರಿನಿಂದ ಆದಿವಾಸಿಗಳ ಚಳುವಳಿ ನಿಲ್ಲಲಿಲ್ಲ. ತಮ್ಮ ಮಿತ್ರರು ಯಾರು ಮತ್ತು ಶತ್ರುಗಳು ಯಾರೆಂಬುದನ್ನು ಅರಿತ ಅವರು ಇನಿಷ್ಟು ಪ್ರಬಲವಾದರಲ್ಲದೆ ಮುಂದಿನ ವರ್ಷ 1946 ಅಷ್ಟೇ ಧೀರೋದಾತ್ತವಾದ ಇನ್ನೊಂದು ಹೋರಾಟಕ್ಕೂ ಸಿದ್ಧರಾದರು. ದಬ್ಬಾಳಿಕೆಗೆ ಹೋರಾಟವನ್ನು ದಮನಿಸಲಾಗುವುದಿಲ್ಲವೆಂಬ ಪಾಠವನ್ನು ಆದಿವಾಸಿಗಳು ತಮ್ಮ ಸ್ವಂತ ಅನುಭವದಿಂದ ಅರಿತು ಕೊಂಡರು.

ರೈತ ರಂಗ

ಕುಂದಾಪುರ

ದ. ಕ. ಜಿಲ್ಲಾ ರೈತ ಸಂಘದ ಕರೆಯಂತೆ ಬರಗಾಲಪೀಡಿತ ಪ್ರದೇಶದ ಜಾನುವಾರುಗಳಿಗಾಗಿ 1500 ಮೂಟೆ ಹುಲ್ಲನ್ನು ಸಂಗ್ರಹಿಸಬೇಕೆಂದು ಕುಂದಾಪುರ ತಾಲ್ಲೂಕಿನ ಗುಲ್ವಾಡಿ ಗ್ರಾಮದಲ್ಲಿ ನಡೆದ ರೈತರ ಸಭೆಯಲ್ಲಿ ನಿರ್ಣಯಿಸಲಾಯಿತು. ಹಾಗೆಯೇ ಕೃಷಿ ಕೂಲಿಗಾರರನ್ನು ಸಂಘಟಿಸಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಬಂಡವಾಳಶಾಹಿ ಭೂ ಮಾಲಕವರ್ಗದ ಆಡಳಿತವನ್ನು ಕಿತ್ತೊಗೆಯಲು ಹೋರಾಟ ಮುಂದುವರಿಸಬೇಕೆಂದು ನಿರ್ಣಯಿಸಲಾಯಿತು. ಕೆ. ರಾಮಕುಚ್ಚಟ್ಟು ಅಧ್ಯಕ್ಷತೆ ವಹಿಸಿದ್ದು ಕೆ. ವೆಂಕಟೇಶ ನ್ಯಾಕ ಮಾರ್ಗದರ್ಶನ ಮಾಡಿದರು

ನಾರಾಯಣ ಮೊಗೇರ, ಅಧ್ಯಕ್ಷ ಕೆ. ರಾಮಕುಚ್ಚಟ್ಟು ಕಾರ್ಯದರ್ಶಿ, ತಿಮ್ಮಪೂಜಾರಿ, ಲಕ್ಷ್ಮಣ ಶೇರಿಗಾರ, ಶೀನ ಶೇರಿಗಾರ, ಕೊರಗ ಪೂಜಾರಿ, ಮಾಣ ಸದಸ್ಯರ ಸಮಿತಿಯನ್ನು ಹೊಸ ವರ್ಷದ ಪದಾಧಿಕಾರಿಗಳಾಗಿ ಆರಿಸಲಾಯಿತು.

ಬಂಟ್ವಾಳ

ಕರ್ನಾಟಕ ಪ್ರಾಂತ ರೈತ ಸಂಘದ ಹೋರಾಟದ ಫಲವಾಗಿ ಭೂ ಶಾಸನ ಕಾನೂನು ಜಾರಿಗೆ ಬಂದಿದ್ದು ಭೂ ಒಡೆತನದ ಹಕ್ಕು ಲಭಿಸಿದ್ದರೂ ಕೂಡ ಭೂ ಮಾಲೀಕರು ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಪಡೆಯುತ್ತಿರುವುದರಿಂದ ರೈತರಿಗೆ ಅನ್ಯಾಯವಾಗುತ್ತಿದೆಂದೂ, ಕಾರಣ ಜಿಲ್ಲಾ ಮಟ್ಟದಲ್ಲೇ ನೇಲ್ವಿಚಾರಣೆಗಾಗಿ ಅಪೆಲೇಟ್ ಟ್ರಿಬ್ಯೂನಲ್‌ಗಳನ್ನು ರಚಿಸಬೇಕೆಂದೂ, ಭೂ ಪರಿಹಾರ ಧನ ಸಿಗದೆ ರೈತರಿಗೆ ಅನ್ಯಾಯವಾಗುತ್ತಿದೆಂದೂ, ಭೂ ಅಭಿವೃದ್ಧಿ ಬ್ಯಾಂಕುಗಳು ರೈತರ ಸಾಲ ವಸೂಲಿಗಾಗಿ ಒತ್ತಾಯ ತರುತ್ತಿರುವುದರಿಂದ ಕಾನೂನಿಗೆ ಸೂಕ್ತ ತಿದ್ದುಪಡಿ ಮಾಡುವ ಅಗತ್ಯವನ್ನು ಒತ್ತಿಹೇಳಿ, ಇವುಗಳಿಗಾಗಿ ಸರಕಾರದ ಮೇಲೆ ಒತ್ತಾಯ ತರಲು ಬಲಿಷ್ಠ ರೈತ ಸಂಘಟನೆ ಕಟ್ಟಬೇಕೆಂದೂ ಜಿಲ್ಲಾ ರೈತಸಂಘದ ಅಬ್ರಹಾಂ ಕರ್ಕಡ ಅವರು ಬಂಟ್ವಾಳ ತಾಲ್ಲೂಕ್ ರೈತ ಸಂಘದ ವಿಸ್ತೃತ ಸಭೆಯಲ್ಲಿ ಕರೆ ನೀಡಿದರು.

ರೈತರು ತಮ್ಮ ಬೇಡಿಕೆಗಳಿಗಾಗಿಯೇ ಹೋರಾಟ ಸೀಮಿತಗೊಳಿಸದೆ ರಾಜಕೀಯ ಹೋರಾಟಕ್ಕೂ ಅಣಿಯಾಗಬೇಕೆಂದು ಕರೆ ನೀಡಿದರು.

ಉದಯ ಬಂಗೇರ ಅಧ್ಯಕ್ಷತೆ ವಹಿದ್ದರು. ಟಿ. ನಾರಾಯಣ ಸ್ವಾಗತಿಸಿದರು.

ಮಾರ್ಚ್ 30, 31- ರಂದು ಮಂಗಳೂರಿನಲ್ಲಿ ಜರುಗಲಿರುವ ಜಿಲ್ಲಾ ರೈತ ಸಮ್ಮೇಳನವನ್ನು ಯಶಸ್ವಿಗೊಳಿಸಲು ನಿರ್ಧರಿಸಲಾಯಿತು.

ಗುಲ್ಬರ್ಗಾ

ರೈತರು ಅಸಂಘಟಿತರಾಗಿರುವುದರಿಂದಲೇ ಆಳುವ ಪಕ್ಷ ರೈತರನ್ನು ಸುಲಿಯಲು ಸಾಧ್ಯವಾಗುತ್ತಿದೆ, ಭೂಮಿ ಹಂಚಿಕೆ, ಬರಗಾಲ ಪರಿಹಾರ, ನೀರಾವರಿಯೋಜನೆಗಳೆಲ್ಲ ಕಡೆಗಣಿಸಲ್ಪಟ್ಟಿವೆ ರೈತರಿಗೆ ನ್ಯಾಯ ಸಿಗಬೇಕಾದರೆ ಬಲಿಷ್ಠವಾದ ಸಂಘಟನೆ ಬೆಳೆದು ಬರುವುದು ಅಗತ್ಯ. ಅದರ ಜೊತೆಯಲ್ಲಿಯೇ ಬಹಳಷ್ಟು ಕೂಲಿಗೆ ತುತ್ತಾಗಿರುವ ಕೃಷಿಕಾರ್ಮಿಕರನ್ನೂ ಸಂಘಟಿಸಿ ಹೋರಾಡಬೇಕೆಂದು ರಾಜ್ಯ ರೈತ ಸಂಘದ ಅಧ್ಯಕ್ಷ ಪಿ. ರಾಮಚಂದ್ರ ರಾವ್ ಅವರು ಗುಲ್ಬರ್ಗಾ ತಾಲೂಕಿನ ಪ್ರಥಮ ಸಮ್ಮೇಳನದಲ್ಲಿ ಕರೆಕೊಟ್ಟರು.

ಭೀಮಶಿ ಸೀತನೂರ, ವಿಜಯಕುಮಾರ್, ವೀರಯ್ಯಸ್ವಾಮಿ ಇವರ ಅಧ್ಯಕ್ಷ ಮಂಡಳಿಯ ನೇತೃತ್ವದಲ್ಲಿ ಸೇರಿದ ಸಮ್ಮೇಳನ ಕಳೆದ 3-4 ವರ್ಷಗಳಿಂದ ಚಟುವಟಿಕೆ ಸಂಘಟನೆಗಳನ್ನು ವಿಸ್ತರಿಸುವುದನ್ನು ಗಮನಿಸಿ, ಇನ್ನೂ ಬಲಿಷ್ಠವಾದ ಸಂಘಟನೆ ಕಟ್ಟುವ ನಿರ್ಧಾರ ಕೈಕೊಂಡಿತು.

ವಿಜಯಕುಮಾರ ಇದನೂರ ಅಧ್ಯಕ್ಷರಾಗಿರುವ, ಶಾಂತವೀರ ಮುಚ್ಚೆ ಕಾರ್ಯದರ್ಶಿ, ರಾಚಯ್ಯ ಖಜಾಂಚಿಯಾಗಿರುವ ಸಮಿತಿಯನ್ನು ಆರಿಸಲಾಯಿತು.

ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ರೈತ ಮುಖಂಡರಾದ ಕಲ್ಲಪ್ಪ ಕಿರಣಗಿ, ಸಿ. ಎ. ಪಾಟೀಲ್, ಪಿ. ರಾಮಚಂದ್ರರಾವ್ ಮೊದಲಾದವರು ಭಾಷಣ ಮಾಡಿದರು ಸಿದ್ದನಗೌಡ ಸಿರಸಗಿ ಅವರು ವಂದನಾರ್ಪಣೆ ಸಲ್ಲಿಸಿದರು

ಲೋಕಸಭೆಯಲ್ಲಿ....

- 1985 ರಲ್ಲಿ ದೇಶಾದ್ಯಂತ ರಾಷ್ಟ್ರೀಯ ಬ್ಯಾಂಕ್‌ಗಳ ಮೇಲೆ ನಡೆದ ಲೂಟಿ ಮತ್ತು ದರೋಡೆಯಿಂದಾಗಿ 159.99 ಲಕ್ಷ ರೂಪಾಯಿ ಹಾನಿಯಾಗಿದೆ.
- 1985 ರಲ್ಲಿ ಮುಷ್ಕರದಿಂದಾಗಿ ಶೇ. 35.3, ಲಾಕೌಟ್‌ದಿಂದಾಗಿ ಶೇ 65 7 ರಷ್ಟು ದುಡಿತದ ದಿನ ಹಾನಿಯಾಗಿವೆ
- 1985 ಡಿಸೆಂಬರ್ ವರೆಗೆ 78 ಬಟ್ಟೆ ಗಿರಣಿಗಳ ಮುಚ್ಚುವಿಕೆಯಿಂದಾಗಿ ಒಂದು ಲಕ್ಷಕ್ಕೆ ಮೇಲ್ಪಟ್ಟು ಕಾರ್ಮಿಕರು ಕೆಲಸ ಕಳೆದು ಕೊಂಡಿದ್ದಾರೆ
- ನಮ್ಮ ದೇಶದ 93,282 ಅಸ್ವಸ್ಥ ಕೈಗಾರಿಕಾ ಘಟಕಗಳಿಂದ ರೂ. 363839 ಕೋಟಿ ಬಾಕಿ ಉಳಿದಿದೆಂದೂ, 31-3-85 ರ ವರೆಗೆ 31 ಕೈಗಾರಿಕೆಗಳಿಂದ ವಸೂಲಾಗ ಬೇಕಾಗಿದ್ದ ರೂ 141.78 ಕೋಟಿಯಲ್ಲಿ 31-12-85 ರ ವರೆಗೆ ರೂ 68.58 ಕೋಟಿ ಮಾತ್ರ ವಸೂಲಾಗಿದೆಂದು ಜನಾರ್ಧನ ಪೂಜಾರಿ ಹೇಳಿದರು.
- ನೇರವಾಗಿ ಒಕ್ಕಲುತನಕ್ಕೆ ಕೊಡ ಮಾಡಿದ ಸಾಲಗಳಲ್ಲಿ 1983 ರಲ್ಲಿ ಶೇ 53.2, 84 ರಲ್ಲಿ ಶೇ. 51.0 84 ರಲ್ಲಿ ಶೇ. 54.5 ರಷ್ಟು ವಸೂಲಿಯಾಗಿದೆಂದು ಜನಾರ್ಧನ ಪೂಜಾರಿ ಹೇಳಿದರು ಆದರೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬಿಟ್ಟು ಎಷ್ಟು ಮೊಬಲಗನ್ನು "ವಸೂಲಿಯಾಗದ ಹಣ" ವೆಂದು ಬಿಡಲು ಪಡಿಸಲಾಗಿದೆಂಬ ಸಿ ಪಿ ಐ (ಎಂ) ಸದಸ್ಯ ಅಮೂಲ್ ದತ್ತ ಅವರ ಪ್ರಶ್ನೆಗೆ ಉತ್ತರ ನೀಡಲು ನಿರಾಕರಿಸಿದರು.

ತೆಲಂಗಾಣಾ ಹೋರಾಟ ಮತ್ತು ಪಕ್ಷದೊಳಗೆ ಭಿನ್ನಾಭಿಪ್ರಾಯಗಳು

ತೆಲಂಗಾಣ ಬಂಡಾಯ ಹಲವಾರು ವೈಶಿಷ್ಟ್ಯಗಳನ್ನು ಹೊಂದಿರುವಂತೆಯೇ ಅದು ನಮ್ಮ ಪಕ್ಷದೊಳಗೂ ವ್ಯಾಪಕ ಚರ್ಚೆಗೆ ಅವಕಾಶ ಮಾಡಿಕೊಟ್ಟಿತು. ಪಕ್ಷದ ವಿಶಾಲಾಂಧ್ರ ರಾಜ್ಯ ಘಟಕದಲ್ಲೂ, ಭಾರತ ಕಮ್ಯುನಿಸ್ಟ್ ಪಕ್ಷದೊಳಗೂ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ವ್ಯಕ್ತವಾದವು, ಕಮ್ಯುನಿಸ್ಟ್ ಪಕ್ಷದೊಳಗೆ ಕಾಂಗ್ರೆಸ್ ಪರ ಮತ್ತು ಕಾಂಗ್ರೆಸ್ ವಿರೋಧಿ ಎಂಬ ಎರಡು ಪ್ರಮುಖ ಪ್ರವೃತ್ತಿಗಳು ಕಾಣಿಸಿಕೊಂಡದ್ದು ಈ ಹಂತದಲ್ಲೇ. ನೆಹರೂ ಅವರ ಸೈನ್ಯ ಹೈದರಾಬಾದನ್ನು ಪ್ರವೇಶಿಸಿ ತೆಲಂಗಾಣ ಹೋರಾಟವನ್ನು ಹತ್ತಿಕ್ಕಲು ಪ್ರಾರಂಭಿಸಿದ ದಿನದಿಂದಲೇ ಈ ವಿವಾದ ಹುಟ್ಟಿಕೊಂಡಿದೆ. ಈ ವಿವಾದವೇ ಕಾರಣವಾಗಿ ವಿಶಾಲಾಂಧ್ರ ರಾಜ್ಯ ಘಟಕವು ಎರಡು ಹೋಳಾಯಿತಲ್ಲದೆ ಆಂಧ್ರರಾಜ್ಯ ಸಮಿತಿ ಮತ್ತು ತೆಲಂಗಾಣ ಅಥವಾ ಹೈದರಾಬಾದ್ ರಾಜ್ಯ ಸಮಿತಿಗಳೆಂಬ ಎರಡು ಪ್ರತ್ಯೇಕ ಘಟಕಗಳಾದವು. ಈ ಎರಡು ವಿಭಾಗಗಳ ನಡುವೆ ಒಂದೆರಡು ವರ್ಷಗಳ ಕಾಲ ರಾಜಿ ಏರ್ಪಟ್ಟರೂ 1955ರಲ್ಲಿ ಮತ್ತೊಮ್ಮೆ ಭಾರತೀಯ ಕ್ರಾಂತಿಯ ಕಾರ್ಯತಂತ್ರ (Tacties) ಮತ್ತು ಕಾರ್ಯಯೋಜನೆ (Strategy) ಗಳ ಕುರಿತು ಚರ್ಚೆ ಪ್ರಾರಂಭವಾಯಿತು. ರಾಜೇಶ್ವರರಾವ್, ನಾರಾಯಣರೆಡ್ಡಿ ಮತ್ತಿತರರು ಕಾಂಗ್ರೆಸ್ ಪರ ನಿಲುವು ವಹಿಸಿದರೆ, ಕಾಂ ಸುಂದರಯ್ಯ, ಕಾಂ ಬಸವಪುನ್ನಯ್ಯ ಮತ್ತಿತರರ ಮುಂದಾಳ್ತನದಲ್ಲಿನ ಇನ್ನೊಂದು ವಿಭಾಗ ಕಾಂಗ್ರೆಸ್ ಸರಕಾರ ಮತ್ತು ಕಾಂಗ್ರೆಸ್ ಪಕ್ಷದ ಇದಿರು, ಕ್ರಾಂತಿಕಾರಿ ವಿರೋಧ ವ್ಯಕ್ತಪಡಿಸುವ ನಿಲುಮೆ ತಾಳಿತು.

ವಿಭಿನ್ನ ಪ್ರವೃತ್ತಿಗಳು

ಕಾಂ. ಸುಂದರಯ್ಯ ಹೇಳಿರುವಂತೆ "ತೆಲಂಗಾಣ ಬಂಡಾಯದ ಕಾಲದಲ್ಲಿ ಅದರಲ್ಲೂ ಮುಖ್ಯವಾಗಿ ಕೊನೆಯ ಎರಡುವರ್ಷಗಳಲ್ಲಿ ಕಮ್ಯುನಿಸ್ಟ್ ಪಕ್ಷ ವಸ್ತುತಃ ಎರಡು ವಿಭಾಗವಾಗಿತ್ತು. ಒಂದನೇ ವಿಭಾಗ ತೆಲಂಗಾಣ ಹೋರಾಟವನ್ನೂ ಅದರ ಸಾಧನೆಗಳನ್ನು ಸಮರ್ಥಿಸಿಕೊಂಡರೆ ಇನ್ನೊಂದು ವಿಭಾಗ ಈ ಹೋರಾಟವನ್ನ ಭಯೋತ್ಪಾದಕ ಕೃತ್ಯವೆಂದು ಹೀಗಳೆಯಲಾರಂಭಿಸಿತು ಹೋರಾಟವನ್ನು ಹೀಗಳೆದ ಮಂದಿ ಅನೇಕ ಸಂದರ್ಭಗಳಲ್ಲಿ ಪತ್ರಿಕೆಗಳಲ್ಲೂ ಈ ರೀತಿಯ ದೋಷಾರೋಪಣೆಯನ್ನು ಪ್ರಕಟಿಸುವ ಮೂಲಕ ಕಮ್ಯುನಿಸ್ಟ್ ಪಕ್ಷದ ಮೇಲೆ ತಿಂಡ ಕಾರಲು ಅದರ ಶತ್ರುಗಳಿಗೆ ವಿಪುಲ ಅವಕಾಶ ದೊರಕಿಸಿಕೊಟ್ಟರು. ಇಡೀ ಪಕ್ಷದಲ್ಲೇ ಇಂತಹ ಭಿನ್ನಭಿಪ್ರಾಯವಿದ್ದರೂ ಅದು ಉತ್ಕಟಾವಸ್ಥೆ ಗೇರಿದುದು ತೆಲಂಗಾಣ ಹೋರಾಟದಲ್ಲಿ ಪ್ರತ್ಯಕ್ಷವಾಗಿ ಭಾಗಿಯಾಗಿದ್ದ ವಿಶಾಲಾಂಧ್ರ ಘಟಕದಲ್ಲಿ. ಅಕ್ಟೋಬರ್ 21, 1951 ರಂದು ತೆಲಂಗಾಣ ಹೋರಾಟವನ್ನು ಹಿಂತೆಗೆದು ಕೊಂಡ ಮೇಲೆ ಪಕ್ಷದಲ್ಲಿ ಸಾಧಿಸಲಾದ ಐಕ್ಯತೆ ಕೇವಲ ತೋರಿಕೆಯ ಐಕ್ಯತೆ ಮಾತ್ರ ಆಗಿತ್ತು ಎನ್ನುವುದನ್ನು ಇತಿಹಾಸ ದೃಢಪಡಿಸಿದೆ. ಪಕ್ಷದೊಳಗೆ ಎರಡು ವಿಭಿನ್ನ ಮತ್ತು ಪರಸ್ಪರ ವಿರೋಧವಾದ ಪ್ರವೃತ್ತಿಗಳು ಈ ಕಾಲದಲ್ಲಿ ಸ್ಪಷ್ಟವಾಗಿ ರೂಪುಗೊಳ್ಳುತ್ತಿದ್ದವು. ಪಕ್ಷವು 1962-63 ರಲ್ಲಿ ವಿಭಜನೆಗೊಂಡಾಗ ವಿಶಾಲಾಂಧ್ರ ರಾಜ್ಯ ಘಟಕವು 1950-51 ರಲ್ಲಿ ಇದ್ದ ರೀತಿಯಲ್ಲೇ ವಿಭಜನೆಗೊಂಡದ್ದು ಕೇವಲ ಆಕಸ್ಮಿಕ ಅಲ್ಲ.

ಭಾರತೀಯ ಕಮ್ಯುನಿಸ್ಟ್ ಚಳುವಳಿಯ ಯಾವನೇ ಅಭ್ಯಾಸಿ ತೆಲಂಗಾಣ ಸಶಸ್ತ್ರ ಬಂಡಾಯ ಎಬ್ಬಿಸಿದ್ದ ವಿವಾದಗಳನ್ನೂ ಮತ್ತು ಚರ್ಚೆಗಳನ್ನೂ ಒತ್ತಟ್ಟಿಗಿರಿಸಿ ಭಾರತ ಕಮ್ಯುನಿಸ್ಟ್ ಪಕ್ಷದ ವಿಭಜನೆಗೆ ಕಾರಣಗಳನ್ನು ಕಂಡುಕೊಳ್ಳಲಾರ.

ಈ ಎಲ್ಲಾ ಕಾರಣಗಳಿಂದ ತೆಲಂಗಾಣ ಸಶಸ್ತ್ರ ಬಂಡಯವನ್ನು ರಶಿಯಾದಲ್ಲಿ ನಡೆದ 1905ರ ವಿಫಲ ಕ್ರಾಂತಿಯೊಂದಿಗೆ ಹೋಲಿಸುವುದೇ ಸರಿ ಸೋವಿಯತ್ ಜನತೆ 1905ರ ವಿಫಲ ಕ್ರಾಂತಿಯನ್ನು ಈಗಲೂ ಜ್ಞಾಪಿಸಿ ಕೊಳ್ಳುತ್ತಿದ್ದಾರೆ. ಈ ಕ್ರಾಂತಿಯಲ್ಲಿ ತಾವು ಅನುಭವಿಸಿದ ಸೋಲಿನಿಂದ ಅನೇಕ ಪಾಠ ಕಲಿತಿದ್ದಾರೆ. ಅಂತೆಯೇ ನಾವೂ ತೆಲಂಗಾಣದ ನಮ್ಮ ಅನುಭವದ ಮೇಲೆ ರಾಜಕೀಯ ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಅನೇಕ ಪಾಠಗಳನ್ನು ಕಲಿತಿದ್ದೇವೆ. ಈ ಪಾಠಗಳು ಭಾರತದ ಕಮ್ಯುನಿಸ್ಟರ ಪಾಲಿಗೆ ಈಗಲೂ ಕೈದೀವಿಗೆಯಾಗಿವೆ.

ಅವಗಣನೆಗೆ ಗುರಿಯಾದ ನಿರಂಜನರ ಸಾಹಿತ್ಯ

(2ನೇ ಪುಟದಿಂದ)

ಅವಕ್ಕೆ ಹೊಣೆಯಾಗಬೇಕಾಗುತ್ತದೆ ಎಂದರು

ಕಾಂ| ಜಿ. ಎನ್. ನಾಗರಾಜ್‌ರವರು ಮಾತನಾಡುತ್ತಾ, ನಿರಂಜನರ ಸಾಹಿತ್ಯ ವಿಮರ್ಶೆಗೊಳಪಡದೆ, ಸಾಹಿತ್ಯಕ ಚರ್ಚೆಗಳಿಗೆ ವಸ್ತುವಾಗದೆ ದೂರವಾಗಿ ಉಳಿದುದರ ಕಾರಣವನ್ನು ವಿಶ್ಲೇಷಿಸುತ್ತಾ, ಶ್ರಮಿಕ ವರ್ಗದ ದೀನರ ಬದುಕಿನ ಬಗ್ಗೆ ಭಿನ್ನವಾದ ದೃಷ್ಟಿ ಕೋನದಿಂದ ಬರೆದ ನಿರಂಜನರ ಸಾಹಿತ್ಯದ ಬಗ್ಗೆ ಅಲಕ್ಷ್ಯ ಒಂದು, ಈ ಧ್ವನಿಯನ್ನೂ ಹತ್ತಿಕ್ಕುವ ಮೌನದ ಒಳ ಸಂಚು (Conspirary of silenec) ಎಂದು ಕರೆದರು

'ಜನಪರ' ಸಾಹಿತ್ಯ ಜನರ ಸಮುದಾಯಕ್ಕೆ ಅರಿವು ಮೂಡಿಸುವ, ಅವರ ಹಿತಗಳನ್ನು ರಕ್ಷಿಸುವ, ಆಳುವ ವರ್ಗದ ಮುಖವಾಡವನ್ನು ಕಳಚುವ ಸಾಹಿತ್ಯವಾದರೆ, ಜನಪ್ರಿಯ ಸಾಹಿತ್ಯ ಜನರನ್ನು ಆಳುವ ವರ್ಗದ ಹಿಡಿತದಲ್ಲಿರಿಸಲು ನಿರಂತರವಾಗಿ ದುಡಿಯುತ್ತಿರುವ ಸಾಹಿತ್ಯ. ನಿರಂಜನರ ಸಮಕಾಲೀನರಲ್ಲಿಯೇ ಈ 'ಜನಪ್ರಿಯ' ಮಸಾಲೆ ಸಾಹಿತ್ಯ.ಪ್ರಗತಿ ಶೀಲ ಎಂಬ ಹೆಸರಿನಲ್ಲಿ ಆರಂಭವಾದರೂ, ನಿರಂಜನರೊಬ್ಬರೇ ನಿಜವಾದ ಪ್ರಗತಿ ಶೀಲ, ಜನ ಸಂಸ್ಕೃತಿಗಳ ಸೃಷ್ಟಿಗೆ ಕಾರಣರಾದರು. ಈ ಮಾತು ಅವರ ಅತ್ಯಂತ ಪ್ರಸಿದ್ಧ ಕಾದಂಬರಿ ಚಿರಸ್ಮರಣೆಯಲ್ಲಿ ಮಾತ್ರವೇ ಅಲ್ಲ, ಅವರ ಅಷ್ಟೇನೂ ಪ್ರಸಿದ್ಧವಲ್ಲದ ವಿಮೋಚನೆ, ನೋವು, ಬಂಗಾರದ ಜಿಂಕೆ ಕಾದಂಬರಿಗಳ ಬಂಡವಾಳಶಾಹಿಗಳ ಬದುಕಿನ ಹೊರ ಆವರಣವನ್ನು ಕಳಚಿ ಒಗೆಯುವ, ಅವರ ಹುರುಳಿಲ್ಲದ ಬದುಕಿನ ಚಿತ್ರಣದ ಮೂಲಕವೂ ಸಿದ್ಧವಾಗುತ್ತದೆ ಎಂದರು

ಕಾ ಪಿ ಕೆ. ಸುಬ್ರಮಣಿಯವರು ವಿಶ್ವ ಸಾಹಿತ್ಯದಲ್ಲಿ ಕ್ರಾಂತಿಕಾರಿ ಮೌಲ್ಯಗಳು ಪ್ರವೇಶ ಮಾಡಿದ ಬಗೆಯನ್ನು, ವಿಶ್ವವನ್ನು ತಲೆಕೆಳಗೆ ಕಾಲು ಮೇಲೆ ಮಾಡಿ ನೋಡುತ್ತಿದ್ದ ಸಮಾಜದಲ್ಲಿ ಅದನ್ನು ಸರಿಪಡಿಸಿದ ಕ್ರಾಂತಿಕಾರಿ ಸಿದ್ಧಾಂತವನ್ನು ಕುರಿತು ಮಾತನಾಡಿದರು

ಅಧ್ಯಕ್ಷತೆ ವಹಿಸಿದ್ದ ಕಾಂ ಎಸ್ ಕೆ. ಉಪಾಧ್ಯಾಯರು ನಿರಂಜನರ ಬದುಕಿನ ವಿವಿಧ ಘಟ್ಟಗಳ ಕುರಿತು ಆತ್ಮೀಯತೆಯಿಂದ ಮಾತನಾಡುತ್ತಾ, ನಿರಂಜನರು ತಮ್ಮ ಕ್ರಾಂತಿಕಾರಿ ಜೀವನವನ್ನು ಪ್ರವೇಶಿಸಿದ ಬಗ್ಗೆ, 'ಜನಶಕ್ತಿ' ಯ ಸಂಪಾದಕರಾಗಿ ವಹಿಸಿದ ಪಾತ್ರದ ಬಗ್ಗೆ ಪರಿಚಯ ಮಾಡಿಸಿದರು. ನಿರಂಜನರ ಸಾಹಿತ್ಯದ ಮುಖ್ಯ ಸತ್ವ ಕ್ರಾಂತಿಕಾರಿ ಚಳುವಳಿಯೊಡನೆ ಅವರ ಒಡನಾಟದಿಂದ ಮೂಡಿಬಂದದ್ದು. ಕ್ರಾಂತಿಕಾರೀ ಜೀವನದಲ್ಲಿ ತೂಗುಯ್ಯಾಲೆಗಳು ಉದ್ಭವಿಸಿದ, ಕಮ್ಯುನಿಸ್ಟ್ ಪಕ್ಷವನ್ನು ತೊರೆದ ನಂತರ ಅವರ ಸಾಹಿತ್ಯದ ಸತ್ವ ಕುಗ್ಗಿತು ಎಂದು ಹೇಳಿದರು.

ಈ ವಿಚಾರ ಸಂಕಿರಣದ ನಂತರ ಸಭೆಗೆ ಆಗಮಿಸಿದ ನಿರಂಜನರು 'ಕೇರಳ ಮತ್ತು ನಾನು' ಎಂಬ ವಿಷಯವಾಗಿ ಯೂ ಕೇರಳದಲ್ಲಿ ನೀಲಕಣ್ಣೂರು ಪ್ರೌಢ ಶಾಲೆಯಲ್ಲಿ ಓದುತ್ತಿದ್ದಾಗ ಕ್ರಾಂತಿಕಾರಿಗಳ ಸಂಪರ್ಕಕ್ಕೆ ಬಂದ, ಕಯ್ಯೂರು ಹೋರಾಟದ ನಾಯಕರುಗಳ ಪರಿಚಯ ಪಡೆದ ಬಗೆಯನ್ನು ನೆನಸಿಕೊಳ್ಳುತ್ತಾ, ತಾವು ಕಮ್ಯುನಿಸ್ಟ್ ಪಕ್ಷವನ್ನು ಸೇರಿದ ನಂತರದ ಜೀವನದ ವಿವರಗಳನ್ನು ಸ್ಮರಿಸಿದರು.

'ಚಿರಸ್ಮರಣೆ' ಕಾದಂಬರಿಯ, ವಸ್ತು ಕಯ್ಯೂರು ವೀರರ ವಿಚಾರಣೆ ಸಂದರ್ಭದಲ್ಲಿ ಪತ್ರಕರ್ತರಾಗಿ ನ್ಯಾಯಾಲಯ, ಸೆರೆಮನೆಗಳಿಗೆ ಭೇಟಿಕೊಟ್ಟು ವಿವರಗಳನ್ನು ಸಂಗ್ರಹಿಸಿದ ಬಗ್ಗೆ ವಿವರವಾಗಿ ಪ್ರಸ್ತಾಪಿಸಿದರು.

'ಚಿರಸ್ಮರಣೆ' ಕಾದಂಬರಿಯನ್ನು ತಾವು ಕಮ್ಯುನಿಸ್ಟ್ ಪಕ್ಷ ತ್ಯಜಿಸಿದ ನಂ ತ ರ ಬರೆದುದಾಗಿ ತಿಳಿಸಿದರು. ಕ್ರಾಂ ತಿ ಕಾ ರಿ ನಾಯಕರುಗಳೂ ಕೂಡ ಕಲೆ, ಸಾಹಿತ್ಯದ ಬಗ್ಗೆ ಅಧ್ಯಯನ ಮಾಡಬೇಕು ಎಂದು ಕೇರಳದ ನಾಯಕರುಗಳ ಉದಾಹರಣೆ ನೀಡಿದರು. ಈ ವಿಚಾರ ಸಂಕಿರಣದ ಆರಂಭದಲ್ಲಿ ಕಾಂ|| ವಾರಿಯರ್ ಸ್ವಾಗತಿಸಿದರು.

ಈ ವಿಚಾರ ಸಂಕಿರಣವನ್ನು ಏರ್ಪಡಿಸಿದ ಕರ್ನಾಟಕ ಪ್ರಗತಿಪರ ಕಲಾರಂಗದ ಸಂಗಾತಿಗಳು ಪ್ರಶಂಸಾರ್ಹರು.

ಚೆಂದುಕುಟ್ಟಿಯವರಿಗೆ ಅನಾರೋಗ್ಯ

ಕಳೆದ ಮೂರು ವಾರಗಳ ಹಿಂದೆ ಹೃದಯಾಘಾತಕ್ಕೊಳಗಾದ ಹಿರಿಯ ಕಮ್ಯುನಿಸ್ಟ್ ಮುಖಂಡರಾದ ಚೆಂದುಕುಟ್ಟಿಯವರು ಈಗ ಚೇತರಿಸಿ ಕೊಳ್ಳುತ್ತಿದ್ದಾರೆಂದು ತಿಳಿದು ಬಂದಿದೆ. ಕಳೆದ 40 ವರ್ಷಗಳಿಂದಲೂ ಶಿವಮೊಗ್ಗ ಜಿಲ್ಲೆಯಲ್ಲಿ ಪಕ್ಷಕ್ಕಾಗಿ ದುಡಿಯುತ್ತಿರುವ ಚೆಂದುಕುಟ್ಟಿಯವರು ಆದಷ್ಟು ಬೇಗ ವಾಸಿಯಾಗಿ ಪಕ್ಷದ ಚಟುವಟಿಕೆಗಳಿಗೆ ಲಭ್ಯವಾಗಲೆಂದು ಸಿ ಪಿ. ಐ (ಎಂ) ಕರ್ನಾಟಕ ರಾಜ್ಯ ಸಮಿತಿ ಹಾರೈಸುತ್ತದೆ.

(7ನೇ ಪುಟದಿಂದ)

ಸುಧಾರಿಸಿತ್ತು. ಆದರೆ ಈ ಬಾರಿಯ ಚೇತರಿಕೆಯಲ್ಲಿ ಅದು ಕಂಡು ಬರುತ್ತಿಲ್ಲ. ಅಸಂಸ್ಥಾದಲ್ಲಿ 1985 ರಲ್ಲಿ ಬೆಲೆಏರಿಕೆ ಸರಾಸರಿ 3%ಇದ್ದರೆ, ಅಲ್ಲಿನ ಕಾರ್ಮಿಕ ಸಂಘಗಳು ಹಾಗೂ ಮಾಲಿಕರ ನಡುವೆ ನಡೆದ ವೇತನ ಒಪ್ಪಂದಗಳಿಂದ ದೊರೆತಿರುವ ಸಂಚಾರಿ ಹೆಚ್ಚಳ 2.3%. ಅಸಂಸ್ಥಾ ಶ್ರಮ ಅಂಕೆ ಸಂಖ್ಯೆ ಕಛೇರಿಯ ಪ್ರಕಾರ 1967ರಲ್ಲಿ ಅಸಂಸ್ಥಾದ ಕಾರ್ಮಿಕನ ಸರಾಸರಿ ನಿಜವೇತನ ಒಂದು ವಾರಕ್ಕೆ 184 8 ಡಾಲರುಗಳಿದ್ದರೆ, ಅದೀಗ 171 3 ಡಾಲರುಗಳಿಗಿಳಿದೆ. ಪಶ್ಚಿಮ ಯೂರೋಪಿನದೂ ಇದೇ ಕಥೆ. "ಹೆಚ್ಚಿನ ದೇಶಗಳಲ್ಲಿ ಕಾರ್ಮಿಕರ ಕೊಳ್ಳುವ ಶಕ್ತಿ ಇಳಿದಿದೆ, ನಿರುದ್ಯೋಗ ಹೆಚ್ಚಿದೆ" ಎನ್ನುತ್ತದೆ ಯೂ ರೋ ಪಿ ಯ ನ್ ಟ್ರೇಡ್ ಯೂನಿಯನ್ಸ್ ಇನ್‌ಸ್ಟಿಟ್ಯೂಟ್‌ನ ಜುಲೈ 1985 ರ ವರದಿ.

	ದೇಶ	1983	1984	1985
ಆಂತರಿಕ ಉತ್ಪಾದನೆಯ ವೃದ್ಧಿ (ಹಿಂದಿನ ವರ್ಷದ ಶೇಕಡಾ)	ಅಸಂಸ್ಥಾ	3.4	6 9	2 4
	ಪ. ಯುರೋಪ್	0 8	2.2	2.25
	ಜಪಾನ್	3 0	5 8	4.7
ಕೈಗಾರಿಕಾ ಉತ್ಪಾದನೆಯ ವೃದ್ಧಿ (ಹಿಂದಿನ ವರ್ಷದ ಶೇಕಡಾ)	ಅಸಂಸ್ಥಾ	6 6	10.6	2 1
	ಪ. ಯುರೋಪ್	0.4	2.9	3.3
	ಜಪಾನ್	3 6	11.1	5.0
ಅಧಿಕೃತ ನಿರುದ್ಯೋಗ (ಲಕ್ಷಗಳಲ್ಲಿ)	ಅಸಂಸ್ಥಾ	107	85	82
	ಪ. ಯುರೋಪ್	117	121	133
	ಜಪಾನ್	16	16	15

ಐಕ್ಯರಂಗ ನಿಧಿ ಸಂಗ್ರಹ

ಮೇ ತಿಂಗಳೊಳಗಾಗಿ ಪಕ್ಷದ ವಾರ ಪತ್ರಿಕೆಯಾದ ಐಕ್ಯರಂಗಕ್ಕೆ ರೂ. 2ಲಕ್ಷ ನಿಧಿ ಕೂಡಿಸಬೇಕೆಂದು ರಾಜ್ಯ ಸಮಿತಿ ಕರೆ ಕೊಟ್ಟಿತ್ತು. ಅದಕ್ಕೆ ಸಂಬಂಧ ಪಟ್ಟ ಕೂಪನುಗಳನ್ನು ಈಗಾಗಲೇ ಹೆಚ್ಚಿನ ಘಟಕಗಳಿಗೆ ತಲ್ಪಿಸಲಾಗಿದೆ. ಪಕ್ಷದ ಚಟುವಟಿಕೆಯನ್ನು ಜಾಗೃತಗೊಳಿಸುವ ದೃಷ್ಟಿಯಿಂದಲೂ ಸಾಮೂಹಿಕ ಸಂಘಟನೆಗಳನ್ನು ವಿಸ್ತರಿಸಿ ಬಲಪಡಿಸುವ ದೃಷ್ಟಿಯಿಂದಲೂ ಐಕ್ಯರಂಗ ನಿಧಿಯನ್ನು ಕೂಡಿಸುವುದು ಮಹತ್ವದ ಕರ್ತವ್ಯವೆಂದು ತಿಳಿಯುವುದು ಅಗತ್ಯ. ಎಲ್ಲಾ ಘಟಕಗಳೂ, ಹಿತೈಷಿಗಳಲ್ಲಿ ಮನ ಪೂರ್ವಕ ತಮ್ಮ ಕರ್ತವ್ಯವನ್ನು ಪೂರೈಸಬೇಕಾಗಿ ವಿನಂತಿ

ಹಿಂದಿನ ಮೊತ್ತ	13,125-00
ಎಸ್.ಕೆ. ಉಪಾಧ್ಯಾಯರ ಮೂಲಕ	100-00
ಅಂಟೋನಿ ವೆಲ್ಡಿಂಗ್ ವರ್ಕ್ಸ್, ಬಿಜಾಪುರ	25-00
ಹಳೇಮನೆ, ಎಣ್ಣೆ ವ್ಯಾಪಾರಿ •	10-000
ಗೆಳೆಯರಿಂದ •	100-00
ನಾಗರಾಳ ಮಠ •	50-00
ಒಟ್ಟು,	13, 50-000

ಭಾರತ ಬಂದ್

ಅಕ್ಕಿ ಆಲೂರ : ಭಾರತ ಬಂದ್ ದಿವಸ 21 ಮಹಿಳೆಯರನ್ನೊಳಗೊಂಡು 130 ಜನರನ್ನು ಬಂಧಿಸಿ, ಜೈಲ್ಲಿ ಹಾಕಿದ್ದಾರೆ. ಮುಂಜಾಗ್ರತೆಯ ಕ್ರಮವಾಗಿ ಹಿಂದಿನ ದಿವಸವೇ ಸಿಪಿಐ (ಎಂ) ಕಾರ್ಯಕರ್ತರಾದ ಎಂ. ಜಿನ್ನಾ, ಬಲರಾಂಉಂಡೇವಲಿಯವರನ್ನೊಳಗೊಂಡು 10 ಸಂಗಾತಿಗಳನ್ನು ರಾತ್ರಿ 8 ಗಂಟೆಗೆ ಪೋಲೀಸರು ಬಂಧಿಸಿದರು. ಬಂದ್ ಅತ್ಯಂತ ಯಶಸ್ವಿಯಾಗಿತ್ತೆಂದು ಫಕೀರಪ್ಪ ಹೋತನ ಹಳ್ಳಿ ತಿಳಿಸಿದ್ದಾರೆ

ಬೀದರ

ಸಿಪಿಐ (ಎಂ) ವಿರೋಧ ಪಕ್ಷಗಳ ಜೊತೆ ಸೇರಿ ಯಶಸ್ವಿ ಬೀದರ ಬಂದ್ ಆಚರಿಸಿತು. ಲೋಕೋಪಯೋಗಿ, ಕಾಂಜಿ, ಅರಣ್ಯ ಖಾತೆ, ರೈತರು ವಿದ್ಯಾರ್ಥಿಗಳೆಲ್ಲ ಸೇರಿ ಪ್ರಚಂಡ ಮೆರವಣಿಗೆ ಹೊರಡಿಸಿ ಸಾರ್ವಜನಿಕ ಸಭೆಯಲ್ಲಿ ಸಮಾವೇಶಗೊಂಡಿತು. ಸಿಪಿಐ (ಎಂ) ಮುಖಂಡರಾದ ಸಂಗ್ರಾಮ್ ಅವರು ಭಾಷಣ ಮಾಡಿ ಕೇಂದ್ರ ಸರ್ಕಾರದ ಬೆಲೆಯೇರಿಕೆ ನೀತಿಯನ್ನು ವಿವರಿಸಿ ಹೋರಾಟವನ್ನು ಮುಂದುವರಿಸಲು ಕರೆ ನೀಡಿದರು.

ಇದೇ ರೀತಿ ಶಹಾಪುರ, ಜೇವರ್ಗಿ ಮತ್ತು ಹಾವೇರಿಗಳಲ್ಲಿಯೂ ಬಂದ್ ಸಂಪೂರ್ಣ ಯಶಸ್ವಿಯಾದ ವರದಿಗಳು ಬಂದಿವೆ.

ವಿಕ್ರಾಂತ್ ಟೈರ್ಸ್ ಚುನಾವಣೆ ಫಲಿತಾಂಶ

ಫೆಬ್ರವರಿ 19 ರಂದು ಮೈಸೂರಿನ ವಿಕ್ರಾಂತ್ ಟೈರ್ಸ್ ಎಂಪ್ಲಾಯೀಸ್ ಯೂನಿಯನ್ (ಸಿ.ಐ ಟಿ ಯು.)ಗೆ ಚುನಾವಣೆ ಶಾಂತಿಯುತವಾಗಿ ನಡೆಯಿತು. ಕಾರ್ಮಿಕರು ಉತ್ಸಾಹದಿಂದ ಮತದಾನದಲ್ಲಿ ಭಾ ಗ ವ ಹಿ ಸಿ ದ್ದು ಸುಮಾರು ಶೇಕಡ 90 ರಷ್ಟು ಮತ ಚಲಾವಣೆ ಯಾಯಿತು.

ಅಧ್ಯಕ್ಷರಾಗಿ ಬಿ ಜಿ. ಮಂಜುನಾಥ್ ಉಪಾಧ್ಯಕ್ಷರುಗಳಾಗಿ ಎಸ್. ನಾಗೇಶ್ ಮತ್ತು ಸಿ. ಚಿಕ್ಕೇಗೌಡ, ಪ್ರಧಾನ ಕಾರ್ಯದರ್ಶಿಯಾಗಿ ಕೆಂಪಸಿಂಗೇಗೌಡ, ಜಂಟಿ ಕಾರ್ಯ ದರ್ಶಿಗಳಾಗಿ ಎಂ.ಕೆ ಸ್ವಾಮಿಗೌಡ ಮತ್ತು ಎಚ್.ಎಂ. ಶಿವಬೋರಯ್ಯ ಹಾಗೂ ಖಜಾಂಚಿಗಳಾಗಿ ಎಸ್. ಚಂದ್ರಪ್ಪ ಆಯ್ಕೆಯಾಗಿರುತ್ತಾರೆ. ಒಟ್ಟು 21 ಅಭ್ಯರ್ಥಿಗಳು ಸ್ಪರ್ಧಾಕಣದಲ್ಲಿದ್ದರು.

ಚುನಾವಣಾಧಿಕಾರಿಯಾಗಿ ಸಿ.ಐ.ಟಿ ಯು ಜಿಲ್ಲಾ ಅಧ್ಯಕ್ಷರಾದ ಕಾಂ. ಎಂ. ಎಸ್ ಉಗ್ರಪ್ಪನವರು ಕೆಲಸ ನಿರ್ವಹಿಸಿದ್ದರು. ಎಲ್. ಐ. ಸಿ., ಎಸ್. ಎಫ್. ಐ., ಡಿ. ವೈ. ಎಫ್.ಐ ಸಂಗಾತಿಗಳು ಚುನಾವಣಾ ಕಾರ್ಯದಲ್ಲಿ ನೆರವಾಗಿದ್ದರು.

ಅಂತರಾಷ್ಟ್ರೀಯ

ಜನಾಂಗೀಯ ಸಮಾನತೆ : ರೇಗನ್ ಆಡಳಿತದ ಗೋಸುಂಬೆತನ

20 ವರ್ಷಗಳ ಹಿಂದೆ, ಸ್ವಾತಂತ್ರ್ಯಗಳ ಬೀಡೆಂದು ಬಡಾಯಿ ಕೊಚ್ಚುವ ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಕರಿಯರ ಹಾಗೂ ಇತರ ಅಲ್ಪಸಂಖ್ಯಾತ ಜನಾಂಗಗಳ ನಾಗರಿಕ ಹಕ್ಕುಗಳಿಗಾಗಿ, ಗುಲಾಮಗಿರಿಯ ಅಂತ್ಯಕ್ಕಾಗಿ ನಡೆಯುತ್ತಿರುವ ಹೋರಾಟದ ಪ್ರತೀಕವಾಗಿದ್ದ, ಮೆಂಫಿಸ್ ನಗರದ ಜಾಡಮಾಲಿಗಳ ಮುಷ್ಕರದಲ್ಲಿ ಸಕ್ರಿಯ ಪಾತ್ರ ವಹಿಸಿದುದಕ್ಕಾಗಿ ಅಸಂಸ್ಥಾದ ಜನಾಂಗ ದ್ವೇಷಿಗಳ ಗುಂಡೇಟಿಗೆ ಬಲಿಯಾದ ಮಾರ್ಟಿನ್ ಲೂಥರ್ ಕಿಂಗ್‌ರವರ ಜನ್ಮ ದಿನ ಜನವರಿ 15 ನ್ನು ಈ ವರ್ಷದಿಂದ ಸಾರ್ವಜನಿಕ ಒತ್ತಾಯಕ್ಕೆ ಮಣಿದು ಅಸಂಸ್ಥಾದಲ್ಲಿ ರಾಷ್ಟ್ರೀಯ ರಜಾ ದಿನವೆಂದು ಘೋಷಿಸಲಾಗಿದೆ.

ಆ ದಿನದಂದು ರೇಡಿಯೋ ಭಾಷಣ ಮಾಡುತ್ತಾ, ಅಧ್ಯಕ್ಷ ರೇಗನ್ ತನ್ನ ದೇಶದಲ್ಲಿ ನಿಜವಾದ ಜನಾಂಗೀಯ ನ್ಯಾಯ ಸಾಧಿಸಲಾಗಿದೆ ಎಂದರಂತೆ. ಆದರೆ ವಾಸ್ತವಾಂಶಗಳು ತದ್ವಿರುದ್ಧವಾಗಿವೆ. ಕರಿಯರು ಧೀರ್ಘ ಹಾಗೂ ತೀವ್ರ ಹೋರಾಟದಿಂದ, ಕಿಂಗ್‌ರಂತಹ ಮಹಾನ್ ವ್ಯಕ್ತಿಗಳ ಬಲಿದಾನದಿಂದ ಪಡೆದ ನಾಗರಿಕ ಹಕ್ಕುಗಳನ್ನು ಕಿತ್ತುಕೊಳ್ಳಲು ಅಸಂಸ್ಥಾದ ಸಂಪ್ರದಾಯ ಶರಣರು ಪ್ರಯತ್ನಿಸುತ್ತಲೇ ಬಂದಿದ್ದಾರೆ. ರೇಗನ್ ಅಧ್ಯಕ್ಷರಾದ ಮೇಲೆ ಅವರ ಶಕ್ತಿ ಹೆಚ್ಚಿದಂತೆ ಕಾಣುತ್ತಿದೆ. ಅಮೇರಿಕದ ಕಾಂಗ್ರೆಸ್‌ನಲ್ಲಿ ಕರಿಯ ಸದಸ್ಯರ ಸಂಖ್ಯೆ 19. ಕರಿಯರ ಜನ ಸಂಖ್ಯೆಯ ಪ್ರಕಾರ ನೋಡಿದರೆ ನ್ಯಾಯವಾಗಿ ಇದು ಅರವತ್ತು ಆಗಿರಬೇಕಿತ್ತು. ಸೇನೇಟ್‌ನಲ್ಲಿಯಂತೂ ಕರಿಯರ ಪ್ರಾತಿನಿಧ್ಯವೇ ಇಲ್ಲ.

ಆಡಳಿತ ಹುದ್ದೆಗಳಲ್ಲಿ ಮೊದಲು ಸ್ವಲ್ಪವಾದರೂ ಪ್ರಾತಿನಿಧ್ಯವಿತ್ತು. ಈಗ ಅದು ಕೂಡಾ ಮೂರನೇ ಒಂದಕ್ಕಿಳಿದಿದೆ. ನ್ಯಾಯಾಂಗದ ಹುದ್ದೆಗಳಲ್ಲಿ ಅದು ಎಂಟನೇ ಒಂದಕ್ಕೆ ಇಳಿದಿದೆ. ಶಾಲೆಗಳಲ್ಲಿ ಜನಾಂಗೀಯ ಪ್ರತ್ಯೇಕತೆ ತಡೆಯುವುದರಲ್ಲಾಗಲಿ ಅಥವಾ ಅಗ್ಗದ ಬಾಡಿಗೆಯ ಮನೆ ಕೊಡಿಸುವುದರಲ್ಲಾಗಲಿ "ಸಮಸ್ಯೆ ರೇಗನ್ ಆಳ್ವಿಕೆಯಲ್ಲಿ ಹದಗೆಟ್ಟಿದೆ" ಎಂದಿದೆ "ಡಲ್ಲಾಸ್ ಮಾರ್ನಿಂಗ್ ನ್ಯೂಸ್" ಎಂಬ ಪತ್ರಿಕೆ

ನಿಗ್ರೋ ಮುಖಂಡ ಜಾರ್ಲ್ಸ್ ಮೆಕಿನ್ನೆ ಪ್ರಕಾರ ಈಗಲೂ ಎಲ್ಲರಿಗಿಂತ ಕೊನೆಗೆ ಕೆಲಸ ಪಡೆಯುವ, ಆದರೆ ಎಲ್ಲರಿಗಿಂತ ಮೊದಲೇ ಕೆಲಸದಿಂದ ತೆಗೆದುಹಾಕಲ್ಪಡುವವರೆಂದರೆ ನಿಗ್ರೋಗಳೇ. ಬಿಳಿಯರು ಇಷ್ಟಪಡದ ಕೆಲಸಗಳಷ್ಟೇ ಕರಿಯರ ಪಾಲಿಗೆ.

1975 ರಲ್ಲಿ ಅಸಂಸ್ಥಾದಲ್ಲಿ ನಿರುದ್ಯೋಗ ಕರಿಯರಲ್ಲಿ 14.1% ಇದ್ದರೆ ಬಿಳಿಯರಲ್ಲಿ 7.6% ಇತ್ತು. 1984 ರ ಆರ್ಥಿಕ ಚೇತರಿಕೆಯಲ್ಲಿ ಕರಿಯರಲ್ಲಿ ಇದು 16 ಕ್ಕೇರಿತು, ಬಿಳಿಯರಲ್ಲಿ 6.5 ಕ್ಕಿಳಿಯಿತು ! ಈಗ ಈ ಶ್ರೀಮಂತ ದೇಶದ ಲ್ಲಿಕರಿಯರಲ್ಲಿ 42% ದರಿದ್ರರು. ಬಹುಶಃ ಕರಿಯರನ್ನು ಇಪ್ಪತ್ತೈದು ವರ್ಷಗಳ ಹಿಂದಿನ ದುಸ್ಥಿತಿಗೆ ಮತ್ತೆ ತಳ್ಳುವ ಪ್ರಯತ್ನಗಳನ್ನು ಮರೆ ಮಾಚಲು ಜನವರಿ 15 ನ್ನು ರಾಷ್ಟ್ರೀಯ ರಜಾ ದಿನವೆಂದು ಘೋಷಿಸಿರಬೇಕು ಎಂಬ ಸಂಶಯ ಅಸಂಸ್ಥಾದ ಕರಿಯರಲ್ಲಿದೆ.

ಇದನ್ನು ಗಮನಿಸಿ ಈ ಜನವರಿ 15 ರಂದು ಮಾರ್ಟಿನ್ ಲೂಥರ್ ಕಿಂಗ್‌ರವರ ಜನ್ಮ ದಿನಾಚರಣೆಯ ವಿರುದ್ಧ ಒಂದು ಪ್ರತಿಭಟನಾ ಮೆರವಣಿಗೆ ನಡೆಸಲು ಅಮೇರಿಕಾದ ಜನಾಂಗ ದ್ವೇಷಕ್ಕೆ ಕುಪ್ರಸಿದ್ಧವಾದ್ದ ಕು-ಕ್ಲಕ್ಸ್ ಕ್ಲಾನ್ ಸಂಘಟನೆಗೆ ಅಧಿಕೃತ ಪರವಾನಿಗೆ ದೊರೆಯಿತು. ಆದರೆ ಕಿಂಗ್‌ರವರ ಮಗ ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ದಕ್ಷಿಣ ಆಫ್ರಿಕಾದ ಜನಾಂಗ ದ್ವೇಷ ನೀತಿಯ ವಿರುದ್ಧ ಮತ ಪ್ರದರ್ಶನದಲ್ಲಿ ಭಾಗವಹಿಸಿದುದಕ್ಕಾಗಿ ಬಂಧಿಸಲಾಯಿತು ! *

ಅಂತರರಾಷ್ಟ್ರೀಯ ಭಯೋತ್ಪಾದಕತೆ- ಅಪರಾಧಿಗಳು ಯಾರು ?

ಅಸಂಸ್ಥಾದ ಪ್ರತಿನಿಧಿ ಸಭೆಯ ವಿದೇಶ ವ್ಯವಹಾರಗಳ ಸಮಿತಿ ಭಯೋತ್ಪಾದಕ ವಿರೋಧಿ ಕ್ರಮಗಳಿಗೆ 4.3 ಶತಕೋಟಿ ಡಾಲರುಗಳ ಅಗಾಧ ಮೊತ್ತವನ್ನು ಮಂಜೂರು ಮಾಡಿದೆ. ಇದು ಆ ದೇಶದ ಜನರ ಪ್ರತಿನಿಧಿಗಳಲ್ಲಿ ಅಂತರ್ರಾಷ್ಟ್ರೀಯ ಭಯೋತ್ಪಾದಕತೆಯ ಬಗೆಗಿರುವ ಆತಂಕವನ್ನು ತೋರ್ಪಡಿಸುತ್ತದೆ ಎನ್ನಲಾಗುತ್ತಿದೆ.

ಆ ದೇಶದಿಂದಲೇ ಇನ್ನೊಂದು ಸುದ್ದಿ ಬಂದಿದೆ. ಪೆನ್ಸಿಲ್ವೇನಿಯಾ ರಾಜ್ಯದ ಒಂದು ಗುಪ್ತ ಶಿಬಿರದಲ್ಲಿ ಇಂಡೋ-ಚೀನಾದೊಳಗೆ ದಾಳಿ ನಡೆಸುವ ಕಮಾಂಡೋಗಳಿಗೆ ತರಬೇತಿ ನೀಡಲಾಗುತ್ತಿದೆ. ಈ ಕೂಲಿ ಸೈನಿಕರ ತರಬೇತಿಯನ್ನು ಖಾಸಗಿಯಾಗಿ ಒಂದು ಬಲಪಂಥೀಯ ತೀವ್ರಗಾಮಿ ಅರೆಸೈನಿಕ 'ಡೆಲ್ಟಾ' ಎಂಬ ಗುಂಪು ನಡೆಸುತ್ತಿದೆ. ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯ ಸುದ್ದಿಗಾರರಿಗೆ ಈ ಗುಂಪಿನ ನಾಯಕ ಹೇಳಿದ ಪ್ರಕಾರ ಈ ಕೂಲಿ ಸೈನಿಕರಲ್ಲಿ ವಿಯೆಟ್ನಾಂನಲ್ಲಿ ಕಗ್ಗೊಲೆ ನಡೆಸಿದ್ದ ಅನುಭವ ಹೊಂದಿರುವವರು ಮತ್ತು ಸದ್ಯ ಅಮೆರಿಕಾದ ಸೈನ್ಯದಲ್ಲಿರುವರು ಕೂಡಾ ಇದ್ದಾರೆ. ಇವರಿಗೆ ಲಾವೋಸ್, ಕಂಪೂಚಿಯಾ ಹಾಗೂ ವಿಯಟ್ನಾಂ ಒಳಗೆ 50 ಕಿ.ಮೀ ವರೆಗೆ ನುಗ್ಗುವ ತರಬೇತಿ ನೀಡಲಾಗುತ್ತಿದೆ.

ಇದರ ಉದ್ದೇಶ ? ಇಂಡೋಚೀನಾದಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ಜನತೆಯ ಹೋರಾಟದಲ್ಲಿ ಸೆರೆಯಾದ ಅಮೇರಿಕನ್ "ಯುದ್ಧ ಕೈದಿ"ಗಳನ್ನು ಬಿಡಿಸುವುದು ! ಇಂತಹ ಯಾವ ಕೈದಿಗಳೂ ಇರುವ ಬಗ್ಗೆ ಸಾಕ್ಷಿಯೇನೂ ಇಲ್ಲ ಎಂದು ಅಮೆರಿಕ ಸರ್ಕಾರ ಹೇಳುತ್ತಾ ಬಂದಿದೆ. ಆದರೂ ಈ ಡೆಲ್ಟಾ ಗುಂಪಿನ ಯೋಜನೆಯ ಬಗ್ಗೆ ಅಸಂಸ್ಥಾ ಆಡಳಿತಕ್ಕೆ ಮತ್ತು ಪ್ರತಿನಿಧಿಸಭೆಗೆ ಬಹಳ ದಿನದಿಂದಗೊತ್ತಿದ್ದರೂ ಅದನ್ನು ತಡೆಯಲು ಏನೂಮಾಡುತ್ತಿಲ್ಲ ಎಂದು ಕೂಡಾ ವಾಷಿಂಗ್ಟನ್ ಪೋಸ್ಟ್ ವರದಿಮಾಡಿದೆ. ಖಾಲಿಸ್ಥಾನಿಗಳಿಗೆ ತರಬೇತಿ ನೀಡುತ್ತಿರುವ ಶಿಬಿರಗಳು ಅಸಂಸ್ಥಾನದಲ್ಲಿವೆಯೆಂಬುದು ನಮಗೀಗಾಗಲೇ ತಿಳಿದಿದೆ. ಸರಿ, ಇದು ಖಾಸಗೀ ರಂಗದಲ್ಲಾಯಿತು.

ಅಸಂಸ್ಥಾದ ಸರ್ಕಾರಿ ವ್ಯವಸ್ಥೆ ಪೆಂಟಗಾನ್ ಕೂಡಾ ಇದರಲ್ಲಿ ಹಿಂದೆ ಬಿದ್ದಿಲ್ಲ. ತನಗಾಗದ ದೇಶಗಳಲ್ಲಿ "ವಿಶೇಷ ಕಾರ್ಯಾಚರಣೆ"ಗಳಿಗೆ ಕಮಾಂಡೊಗಳ ತರಬೇತಿ ಅದಕ್ಕೂ ಕೂಡಾ ಹೊಸದೇನಲ್ಲ.

ನಿಕಾರಗುವಾದ ನೆರೆಯ ದೇಶಗಳಾದ ಹೊಂಡುರಾಸ್ ಮತ್ತು ಎಲ್ ಸಾಲ್ವಡೊರ್‌ನಲ್ಲಿ ಕ್ರಾಂತಿವಿರೋಧಿ, ಪ್ರತಿಗಾಮಿ "ನಿಕಾರಗುವಾ ಡೆಮೊಕ್ರಟಿಕ್ ಫ್ರಂಟ್"ಗಾಗಿ ಒಂದು ನಾವಿಕ ಪಡೆ ನಿರ್ಮಿಸುವ ಅಂಸಸ್ಥಾದ ಯೋಜನೆಗಳನ್ನು ಇತ್ತೀಚೆಗಷ್ಟೇ ನಿಕಾರಗುವಾದ ಆಂತರಿಕ ಮಂತ್ರಿ ಟೋಮಸ್ ಬೋರ್ಗೆ ಬಯಲಿಗೆಳೆದಿದ್ದಾರೆ. ಅಲ್ಲದೆ ಕಳೆದ ತಿಂಗಳು ಅಧ್ಯಕ್ಷ ರೇಗನ್ನರ ಹೊಸ ರಾಷ್ಟ್ರೀಯ ಭದ್ರತಾ ಸಲಹೆಗಾರ ವೈಸ್ ಎಡ್ಮಿರಲ್ ಪೋಯಿಂಡೆಕ್ಸ್ಟರ್ ಹಾಗೂ ಅಂತರ ಅಮೇರಿಕನ್ ವ್ಯವಹಾರಗಳ ಆಂತರಿಕ ಸಹಾಯಕ ಕಾರ್ಯದರ್ಶಿ ಇಲಿಯಟ್ ಅಬ್ರಾಮ್ಸ್ ಗ್ವಾಟೆಮಾಲಾ, ಹೊಂಡುರಾಸ್, ಎಲ್ ಸಾಲ್ವಡೊರ್ ಹಾಗೂ ಕೋಸ್ಟಾರಿಕಾಗಳಿಗೆ ಭೇಟಿನೀಡಿ ಪ್ರತಿಗಾಮಿ ಕ್ರಾಂತಿ ವಿರೋಧಿಗಳಿಗೆ ಮಿಲಿಟರಿ ನೆರವನ್ನು ಹೆಚ್ಚಿಸಲಾಗುವುದೆಂದು ಭರವಸೆ ನೀಡಿದ್ದರು. ಆಫ್ರಿಕಾದಲ್ಲೂ ಅಂಗೋಲಾದ ಕ್ರಾಂತಿಕಾರಿ ಸರಕಾರವನ್ನು ಉರುಳಿಸಲು ಯುನಿಟಾ ಭಯೋತ್ಪಾದಕರಿಗೆ ಅಸಂಸ್ಥಾದ ಪೂರ್ಣ ನೆರವು ಇರುವುದನ್ನು ಜನವರಿ 30 ರಂದು ಈ ಭಯೋತ್ಪಾದಕ ಸಂಘಟನೆ ಮುಖ್ಯಸ್ಥ ಜೋನಾಸ್ ಸಾವಿಂಬಿ ವಾಷಿಂಗ್ಟನ್‌ಗೆ ಬಂದಾಗ ಆತನಿಗೆ ಅಧ್ಯಕ್ಷ ರೇಗನ್, ರಕ್ಷಣಾ ಕಾರ್ಯದರ್ಶಿ, ಸೇನಾಧಿಕಾರಿಗಳು ಹಾಗೂ ಸಿ. ಐ. ಎ. ಡೈರೆಕ್ಟರರಿಂದ ದೊರೆತ ಭಾರಿ ಉಪಚಾರದಿಂದ ಸ್ಪಷ್ಟವಾಗುತ್ತದೆ. ಈ ಭಯೋತ್ಪಾದಕರಿಗೆ ಕೊಡುವ ನೆರವಿನ ಮೊತ್ತ ಈ 4.3 ಶತಕೋಟಿ ಡಾಲರುಗಳಲ್ಲಿ ಸೇರಿದೆಯೋ ಇಲ್ಲವೋ ಅದು ಬೇರೇನೇ ಜನಾ ಖಚಿತ ತಿಳಿದಿಲ್ಲ. ಅಂತೂ ಆಷಾಢಭೂತಿತನದಲ್ಲಿ ಸಾಮ್ರಾಜ್ಯಶಾಹಿಗಳು ಹೊಸತೊಂದು ದಾಖಲೆ ಸೃಷ್ಟಿಸುತ್ತಿದ್ದಾರೆ

ಚಾಲೆಂಜರ್ ದುರಂತ : ಉತ್ತರವಿಲ್ಲದ ಪ್ರಶ್ನೆಗಳು

ಇತ್ತೀಚೆಗೆ ಅಸಂಸ್ಥಾದ ಫ್ಲೋರಿಡಾದಿಂದ ಆಕಾಶಕ್ಕೆ ಹಾರಿ ಬಿಟ್ಟ ಚಾಲೆಂಜರ್ ಷಟಲ್ ವ್ಯೋಮ ನೌಕೆ ಕೆಲವೇ ಕ್ಷಣಗಳಲ್ಲಿ ಸ್ಫೋಟಗೊಂಡು ಅದರಲ್ಲಿದ್ದ ಇಬ್ಬರು ಮಹಿಳಾ ಗಗನ ಯಾತ್ರಿಗಳೂ ಸೇರಿದಂತೆ ಎಲ್ಲರನ್ನು ಬಲಿತೆಗೆದುಕೊಂಡ ದುರಂತ ಅಮೆರಿಕಾದ ಜನತೆಯನ್ನು ಮಾತ್ರವಲ್ಲ ಸಮಸ್ತ ಜಗತ್ತಿನ ಜನಗಳನ್ನು ತಲ್ಲಣಗೊಳಿಸಿತು. ಗಗನಯಾತ್ರೆಯ ಸಾಹಸಮಯತೆಯ ಬಗ್ಗೆ ಚೆನ್ನಾಗಿ ಬಲ್ಲ, ಶುಕ್ರ ಗ್ರಹದ ಮೇಲ್ಮೈನ ನಕಾಶೆಗಳನ್ನು ತಯಾರಿಸುತ್ತಿದ್ದ ಸೋವಿಯತ್ ವಿಜ್ಞಾನಿಗಳು ಆ ಗ್ರಹದ ಎರಡು ಜ್ವಾಲಾಗುಂಡಿಗಳಿಗೆ ಚಾಲೆಂಜರ್‌ನಲ್ಲಿದ್ದ ಇಬ್ಬರು ಮಹಿಳಾ ಗಗನಯಾತ್ರಿಗಳ ಹೆಸರಿಟ್ಟು ತಮ್ಮ ಶ್ರದ್ಧಾಂಜಲಿ ಸೂಚಿಸಿದ್ದಾರೆ.

ಚಾಲೆಂಜರ್‌ನ ಈ ದುರಂತ ಅಮೆರಿಕನ್ನರಲ್ಲಿ ಸಾವಿರಾರು ಪ್ರಶ್ನೆಗಳನ್ನು ಎಬ್ಬಿಸಿದೆ. ಮಾಜಿ ಗೃಹ ಕಾರ್ಯದರ್ಶಿ ವಿಲಿಯಂ ರೋಜರ್ಸ್ ನೇತೃತ್ವದಲ್ಲಿ ಒಂದು ತನಿಖಾ ಆಯೋಗವನ್ನು ಅಧ್ಯಕ್ಷ ರೇಗನ್ ನೇಮಿಸಿ 120 ದಿನಗಳಲ್ಲಿ ಈ ದುರಂತಕ್ಕೆ ಕಾರಣಗಳೇನೆಂದು ಕಂಡು ಹಿಡಿಯಬೇಕೆಂದು ಹೇಳಿದ್ದಾರೆ. ಆದರೆ ಕೆಲವು ನೇರ ಪ್ರಶ್ನೆಗಳಿಗೆ ಉತ್ತರ ಸಿಗಲಾರದೇ ಎಂದು ಕಾದು ನೋಡಬೇಕಾಗಿದೆಯಷ್ಟೆ. ಈ ಷಟಲ್ ನೌಕೆಯನ್ನು ತಯಾರಿಸಿ ಕೊಟ್ಟ ಸಂಸ್ಥೆಯೇ ಈ ಪ್ರಯಾಣವನ್ನು ಮುಂದೂಡಲು ಹೇಳಿದ್ದರೂ ಯಾಕೆ ಅದನ್ನು ನಿರ್ಲಕ್ಷಿಸಲಾಯಿತು ? ಅಮೆರಿಕಾದ ಬಾಹ್ಯಾಕಾಶಯಾನ ಸಂಘಟನೆಗೆ ವರ್ಷಕ್ಕೆ 18 ಯಾತ್ರೆಗಳು ಸಾಕಷ್ಟಾಗುತ್ತವೆ. ಆದರೆ ಅದು 24 ಯಾತ್ರೆಗಳನ್ನು ಏಕೆ ಯೋಜಿಸಿಕೊಂಡಿದೆ ? ಚಾಲೆಂಜರ್‌ನ ಪ್ರತಿಯೊಂದು ಪ್ರಯಾಣದಲ್ಲೂ ತೊಂದರೆಗಳಿದ್ದರೂ ಅವಸರ ಅವಸರವಾಗಿ ಎಲ್ಲಾ ಪ್ರಯಾಣಗಳನ್ನು ನಡೆಸಲು ಪ್ರಯತ್ನಿಸಿದ್ದೇಕೆ ? ಈ ಪ್ರಯಾಣಗಳ ಹಿಂದೆ ಮಿಲಿಟರಿ ಉದ್ದೇಶಗಳೇನಾದರೂ ಇವೆಯೇ ?

ಈಗ ಯೋಜಿತ 24 ಪ್ರಯಾಣಗಳಲ್ಲಿ ಕೇವಲ 18 ಮಾತ್ರ ಸಾಧ್ಯವಾಗುವುದರಿಂದ ಮುಂಬರುವ ವರ್ಷಗಳಲ್ಲಿ ಹಲವಾರು ನಾಗರೀಕ ಪ್ರಯಾಣಯೋಜನೆಗಳು ತಲೆಕೆಳಗಾಗಲಿವೆಯಂತೆ. ಅಮೇರಿಕಾ ಬಾಹ್ಯಾಕಾಶ ಸಂಘಟನೆ 'ನಾಸಾ' ತಾನು ಪಡೆಯುತ್ತಿರುವ ಮಿಲಿಟರಿ ನೆರವಿಗೆ ತೆರಬೇಕಾದ ಬೆಲೆ ಇದೆಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಹೇಳಿದೆ. ಐದು ವರ್ಷಗಳ ಹಿಂದೆನೇ ಅಸಂಸ್ಥಾ ಬಾಹ್ಯಾಕಾಶ ಕಾರ್ಯಕ್ರಮದ ಒಬ್ಬ ಸಂಸ್ಥಾಪಕರಾದ ಜೇಮ್ಸ್ ವಾನ್ ಅಲೆನ್ 'ನಾಸಾ' ಈ ಷಟಲ್ ನೌಕೆಯ ಬಳಕೆಯಲ್ಲಿ ರಕ್ಷಣಾ ಖಾತೆಯ ಕಾಲಡಿ ನುಚ್ಚು ನೂರಾಗಲಿದೆ ಎಂದು ಎಚ್ಚರಿಸಿದ್ದರಂತೆ. “ಇದೊಂದು ಮಿಲಿಟರಿ ಕಾರ್ಯಕ್ರಮ ಎಂದೇಕೆ ಪ್ರಾಮಾಣಿಕವಾಗಿ ಹೇಳಿಬಿಡಬಾರದು ?” ಎಂದು ಈ ಷಟಲ್ ಕಾರ್ಯಕ್ರಮದ ಇನ್ನೊಬ್ಬ ವಿಜ್ಞಾನಿ ನೇರವಾಗಿ ಕೇಳಿದ್ದರಂತೆ. 1992ರ ಹೊತ್ತಿಗೆ ಅಮೇರಿಕಾದ ಮಿಲಿಟರಿ ವ್ಯವಸ್ಥೆ ಪೆಂಟಗನ್‌ಗೆ ತನ್ನ “ತಾರಾಯುದ್ಧ” ಕಾರ್ಯಕ್ರಮಕ್ಕೆ ಹಾಗೂ ಗೂಢಚರ್ಯ ಕೃತಕ ಉಪಗ್ರಹಗಳನ್ನು ಸ್ಥಾಪಿಸಲು ವರ್ಷಕ್ಕೆ ಇಂತಹ 15 ಪ್ರಯಾಣಗಳು ಅಗತ್ಯವಾಗುತ್ತವೆ ಎಂದು ಲೆಕ್ಕ ಹಾಕಲಾಗಿದೆ. ಷಟಲ್ ಹಾರಾಟಗಳನ್ನು ಇಷ್ಟೊಂದು ತರಾತುರಿಯಿಂದ ನಡೆಸಲು ಇನ್ನೊಂದು ಕಾರಣವಿದೆ. ಕೃತಕ ಉಪಗ್ರಹಗಳನ್ನು ಆಕಾಶದಲ್ಲಿ ನೆಲೆಗೊಳಿಸುವ ಒಂದು ಕಾಂಟ್ರಾಕ್ಟ್ ಪಡೆಯಲು 'ನಾಸಾ' ಯುರೋಪಿಯನ್ ಬಾಹ್ಯಾಕಾಶ ಏಜೆನ್ಸಿಯೊಂದಿಗೆ ಸ್ಪರ್ಧಿಸುತ್ತಿದೆ. ಆದ್ದರಿಂದ 'ಪೆಂಟಗನ'ನ ಕೆಲಸ ಮಾಡಿಕೊಟ್ಟು ತನ್ನ ಸ್ಪರ್ಧಾಕ್ಷಮತೆ ಉಳಿಸಿಕೊಳ್ಳಲು 'ನಾಸಾ' ಷಟಲ್ ಪ್ರಯಾಣಗಳ ಸಂಖ್ಯೆ ಹೆಚ್ಚಿಸಲೇಬೇಕು !

ಬಾಹ್ಯಾಕಾಶವನ್ನು “ತಾರಾಯುದ್ಧ”ದ ಅಖಾಡ ಮಾಡಲು ಯತ್ನಿಸಿದರೆ ಚಾಲೆಂಜರ್ ದುರಂತದಂತಹ ದುರಂತಗಳು ಅಸಂಖ್ಯವಾಗಿ ಹೆಚ್ಚುವುದಂತೂ ನಿಜ. *

ಬಂಡವಾಳಶಾಹೀ ಜಗತ್ತು : ಚೇತರಿಕೆ, ಜೀವನ ಮಟ್ಟ ಇಳಿಮುಖ

1983 ಹಾಗೂ 1984 ರಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನ ಹಾಗೂ ಜಪಾನ್‌ನಲ್ಲಿ ಕಂಡು ಬಂದ ಆರ್ಥಿಕ ಚೇತರಿಕೆ 1985 ರಲ್ಲಿ ತಗ್ಗಿದೆಯೆನ್ನುವುದು ಇತ್ತೀಚಿನ ಅಂಕಿ ಸಂಖ್ಯೆಗಳಿಂದ ತಿಳಿದುಬಂದಿದೆ. ಆದರೆ ಇಂತಹ ಚೇತರಿಕೆ ಸ್ವಲ್ಪ ತಡವಾಗಿ ಆರಂಭವಾದ ಪಶ್ಚಿಮ ಯೂರೋಪಿನಲ್ಲಿ ಇದು 1985 ರಲ್ಲಿಯೂ ಮುಂದುವರಿದಂತಿದೆ ಎಂದು ಕೆಲವು ಅಂಕಿ-ಸಂಖ್ಯೆಗಳು ತೋರಿಸಿವೆ.

ಈ ಹಿಂದೆ ದ್ವಿತೀಯ ಯುದ್ಧನಂತರದ ಬಿಕ್ಕಟ್ಟುಗಳಿಂದ ಚೇತರಿಕೆ ಕಂಡಾಗಲೆಲ್ಲಾ ಬಂಡವಾಳ ಶಾಹಿ ದೇಶಗಳಲ್ಲಿ ನಿರುದ್ಯೋಗ ಕಡಿಮೆಯಾಗಿ ಜನತೆಯ ಜೀವನ ಮಟ್ಟ

(6ನೇ ಪುಟ ನೋಡಿ)

ಬೀಡಿ ಕಾರ್ಮಿಕರ ಹೋರಾಟ

ಮೂಡಬಿದ್ರಿ

ಮೂಡಬಿದ್ರೆ ಬೀಡಿ ಕೆಲಸಗಾರರ ಕಾರ್ಮಿಕರ ಬಹಿರ್ ಪ್ರದರ್ಶನವನ್ನು ಬೀಡಿ ಮಾಲೀಕರ ಡಿಪೋದ ಮುಂದೆ ನಡೆಸಿತು.

ಕಾರ್ಮಿಕರಿಗೆ ಕೊಡಬೇಕಾದ ಮಜೂರಿ ಮತ್ತು ತುಟ್ಟಿಭತ್ತೆಯನ್ನು ಕೆಲವು ಕಂಟ್ರಾಕ್ಟುದಾರರು ಕೊಡುವುದಿಲ್ಲ. ಇದನ್ನು ತನಿಖೆ ಮಾಡಿ ಸರಿಪಡಿಸಬೇಕು ಎಲೆ ತಂಬಾಕಿನ ಎವರೇಜಿನ ಹೆಸರಿನಲ್ಲಿ ಮಜೂರರಿಂದ ಕಾನೂನು ಬಾಹಿರವಾಗಿ ದಂಡ ವಸೂಲಿ ಮಾಡುತ್ತಾರೆ ಇದು ನಿಲ್ಲಬೇಕು. ಕಂಪನಿಯ ಎವರೇಜನ್ನು ಪ್ರತೀ ಕಂಟ್ರಾಕ್ಟುದಾರರು ಕೊಡುವುದಿಲ್ಲ. ಇದನ್ನು ತನಿಖೆ ಮಾಡಿ ಸರಿಪಡಿಸಬೇಕು ಎಲೆ ತಂಬಾಕಿನ ಎವರೇಜಿನ ಹೆಸರಿನಲ್ಲಿ ಮಜೂರರಿಂದ ಕಾನೂನು ಬಾಹಿರವಾಗಿ ದಂಡ ವಸೂಲಿ ಮಾಡುತ್ತಾರೆ. ಇದು ನಿಲ್ಲಬೇಕು ಕಂಪನಿಯ ಎವರೇಜನ್ನು ಪ್ರತೀ ಕಂಟ್ರಾಕ್ಟುದಾರರು ನೋಟೀಸು ಮೂಲಕ ತಿಳಿಸಬೇಕು. ಪ್ರಾವಿಡೆಂಟ್ ಫಂಡಿಗೆ ಕಾರ್ಮಿಕರ ವೇತನದಿಂದ ವಜಾ ಮಾಡುವ ಹಣಕ್ಕೆ ಸರಿಯಾದ ರಸೀದಿಯನ್ನು ಕೊಡುವಂತೆ ಏರ್ಪಾಡು ಮಾಡಬೇಕು.

ವಾರದ ಮಜೂರಿ ಬಟವಾಡೆ ಮಾಡುವಾಗ ಕಾನೂನು ಪ್ರಕಾರ ಕೊಡಬೇಕಾದ ವೇಜ್ ಸ್ಲಿಪ್ ಕೊಡಬೇಕು ಲಾಗ್ ಪುಸ್ತಕ ಕೊಡಬೇಕು. ಅದರಲ್ಲಿ ಕಾರ್ಮಿಕರು ಕೊಟ್ಟ ಬೀಡಿಯ ದಾಖಲೆ ಮಾಡಬೇಕು. ಹದಿನೈದು ದಿವಸದೊಳಗೆ ಬೇಡಿಕೆಗಳು ಮಂಜೂರಾಗದಿದ್ದರೆ ತೀವ್ರ ಹೋರಾಟ ನಡೆಸಬೇಕಾದೀತೆಂದು ಬೀಡಿ ಫೆಡರೇಶನ್ ಮುಖಂಡರಾದ ಯು.ಜಿ ಲೋಕಯ್ಯ ಮತ್ತು ಬಾಲಕೃಷ್ಣ ಶೆಟ್ಟಿ ಎಚ್ಚರಿಕೆ ನೀಡಿದ್ದಾರೆ.

ಪಡಂದಕ್ಕ ಕಟ್ಟೆ

ಪಡಂದಕ್ಕ ಕಟ್ಟೆಯ ಬಳಿ ಬೀಡಿ ಕಾರ್ಮಿಕರ ಸಭೆಯು ಹೊಬಯ್ಯ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಸೇರಿತ್ತು.

ಸಿ.ಐ.ಟಿ.ಯು. ಜೊತೆ ಕಾರ್ಯದರ್ಶಿ ಯು ಬಿ ಲೋಕಯ್ಯ ಸಭೆಯನ್ನು ಉದ್ಘಾಟಿಸುತ್ತಾ ಬೀಡಿ ಕಾರ್ಮಿಕರು ಧೀರ ಹೋರಾಟದಿಂದ ಪಡೆದ ಸೌಲಭ್ಯಗಳನ್ನು ಎಲೆ ಎವರೇಜಿನ ಹೆಸರಿನಲ್ಲಿ ಲಾಗ್ ಪುಸ್ತಕದಲ್ಲಿ ಬೀಡಿ ಸರಿಯಾಗಿ ಬರೆಯದೆ ಪ್ರಾವಿಡೆಂಟ್ ಫಂಡಿನ ಲೆಕ್ಕ ಸರಿಯಾಗಿ ಕೊಡದೆ, ಕಾರ್ಮಿಕರ ಶೋಷಣೆ ಮಾಡುವ ಕಂಟ್ರಾಕ್ಟುದಾರರನ್ನು ಮತ್ತು ಮಾಲಕರನ್ನು ಕಟುವಾಗಿ ಟೀಕಿಸಿದರು

ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನಿನ ಜೊತೆ ಕಾರ್ಯದರ್ಶಿ ಜೆ ಬಾಲಕೃಷ್ಣ ಶೆಟ್ಟಿ ಮಾತನಾಡುತ್ತ ಬೀಡಿ ಕಾರ್ಮಿಕರ ಸಂಘಟನೆಯನ್ನು ಬಲಿಷ್ಠವಾಗಿ ಕಟ್ಟಲು ಊರ ಜನರ ಸಹಕಾರವನ್ನು ಕೋರಿದರು

ಸಭೆಯಲ್ಲಿ ಹೊಬಯ್ಯ ಪೂಜಾರಿ ಅಧ್ಯಕ್ಷರಾಗಿ, ಶಂಗಪ್ಪ ಪೂಜಾರಿ, ಸಂಕಪ್ಪ ಪೂಜಾರಿ ಉಪಾಧ್ಯಕ್ಷರಾಗಿ, ಮುತ್ತಪ್ಪಗೌಡ, ಕಾರ್ಯದರ್ಶಿಯಾಗಿ ಕೃಷ್ಣಪ್ಪ ಪೂಜಾರಿ, ಶ್ರೀಮತಿ ಲಕ್ಷ್ಮಿ ಜೊತೆಕಾರ್ಯದರ್ಶಿಯಾಗಿ, ಕೆ ಎಸ್. ಅಬ್ದುಲ್ ಹಮೀದ್ ಕೋಶಾಧಿಕಾರಿಯಾಗಿ ಮತ್ತು ಹದಿನೆಂಟು ಮಂದಿಯುಳ್ಳ ಕಾರ್ಯಕಾರಿ ಸಮಿತಿಯನ್ನು ಸರ್ವಾನುಮತದಿಂದ ಸಭೆಯು ಆರಿಸಿತು

ಮೂಲ್ಕಿ

ಪೂವ ಕೋಟ್ಯಾನ್‌ರವರ ಅಧ್ಯಕ್ಷತೆಯಲ್ಲಿ ಬೀಡಿಕೆಲಸಗಾರರ ಸಭೆ ಸೇರಿ ಬಲಿಷ್ಠ ಸಂಘಟನೆ ಕಟ್ಟಲು ನಿರ್ಧರಿಸಿತು.

ರಾಮ ಕೆ. ಸುಂದರ್ ಸಭಿಕರನ್ನು ಸ್ವಾಗತಿಸಿದರು ಅಖಿಲ ಪ್ರದೇಶ ಬೀಡಿ ಲೇಬರ್ ಯೂನಿಯನಿನ ಕಾರ್ಯದರ್ಶಿ ಜೆ ಬಾಲಕೃಷ್ಣ ಶೆಟ್ಟಿ, ಮಂಗಳೂರು ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಜೆ. ವೀರಪ್ಪ ಮಹಾಸಭೆಗೆ ಶುಭ ಕೋರಿ ಮಾತನಾಡಿದರು.

ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನಿನ ಕಾರ್ಯದರ್ಶಿ ಯು ಜಿ. ಲೋಕಯ್ಯನವರು 12ರಿಂದ 21 ತನಕ ನಡೆದ ಬೀಡಿ ಕಾರ್ಮಿಕರ ಚಳವಳಿ ಮತ್ತು ಅದ ಒಪ್ಪಂದವನ್ನು ವಿವರಿಸಿದರು ಕನಿಷ್ಠ ಮಜೂರಿ 15 ರೂಪಾಯಿ ಪಡೆಯಲು ಕಾರ್ಮಿಕರು ಸಂಘಟನೆಯನ್ನು ಬಲಪಡಿಸಬೇಕೆಂದು ಕರೆ ನೀಡಿದರು

ಮುಂದಿನ ವರ್ಷಕ್ಕೆ ನಾರಾಯಣ ಸುವರ್ಣ ಅಧ್ಯಕ್ಷರಾಗಿ ಪೂವ ಕೋಟ್ಯಾನ್ ವಾರಿಜ ಉಪಾಧ್ಯಕ್ಷರಾಗಿ, ಕುಮಾರ ಸನಂದ ಕಾರ್ಯದರ್ಶಿಯಾಗಿ, ಸುಶೀಲ, ಬೇಬಿ ಜೊತೆ ಕಾರ್ಯದರ್ಶಿಯಾಗಿ, ಎಮ್. ಜಲಜ ಕೋಶಾಧಿಕಾರಿಯಾಗಿ ಮತ್ತು ಇಪ್ಪತ್ತು ಮಂದಿಯುಳ್ಳ ಕಾರ್ಯಕಾರಿ ಸಮಿತಿಯನ್ನು ಸಭೆಯು ಸರ್ವಾನುಮತದಿಂದ ಆರಿಸಿತು

ಗುಂಡ್ಲುಪೇಟೆ

ಗುಂಡ್ಲುಪೇಟೆ ತಾಲ್ಲೂಕು ಕಗ್ಗಳ ಗ್ರಾಮದಲ್ಲಿ ಬೀಡಿ ಕಾರ್ಮಿಕರ ಸರ್ವ ಸದಸ್ಯರ ಸಭೆ ನಡೆಯಿತು ಸಂಘದ ಅಧ್ಯಕ್ಷರಾದ ಕಾಂ ಎಂ ಎಸ್ ಉಗ್ರಪ್ಪನವರು ಅಧ್ಯಕ್ಷತೆ ವಹಿಸಿದ್ದರು ಕರ್ನಾಟಕ ರಾಜ್ಯದ ಬೀಡಿ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಕಾಂ ಮಹಮದ್ ದಸ್ತಗೀರ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು ಅಧ್ಯಕ್ಷರು ಪ್ರಾರಂಭದಲ್ಲಿ ಮಾತನಾಡುತ್ತಾ ಗುಂಡ್ಲುಪೇಟೆ ತಾಲ್ಲೂಕಿನ ಬೀಡಿ ಕಾರ್ಮಿಕ ಸಂಘವನ್ನು ಬಲಪಡಿಸಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿದರು. ನಂತರ ಮುಖ್ಯ ಅತಿಥಿಗಳು ಮಾತನಾಡಿ ಬೀಡಿ ಕಾರ್ಮಿಕರು ಈಗ ಅನುಭವಿಸುತ್ತಿರುವ ನಾನಾ ಬಗೆಯ ಶೋಷಣೆಗಳನ್ನು ಒಂದೊಂದಾಗಿ ವಿವರಿಸಿದರು. ಹಾಗೆಯೇ ಬೀಡಿ ಕಾರ್ಮಿಕರ ಸಂಘಟನೆಯು ಇಡೀ ದೇಶದಲ್ಲಿ ಕೇರಳದಿಂದ ಮೊದಲ್ಗೊಂಡು ನೆರೆಯ ರಾಜ್ಯಗಳಲ್ಲಿ ಬೆಳೆದು ಬಂದು ನಡೆಸಿದ ಹೋರಾಟಗಳ ಫಲವಾಗಿ ಬಂದ ಕಾಯಿದೆ ಮತ್ತು ಪಡೆದ ಸೌಲಭ್ಯಗಳನ್ನು ವಿವರಿಸಿದರು.

ಕೇಂದ್ರ ಮತ್ತು ರಾಜ್ಯ ಸರಕಾರಗಳ ಅಸಡ್ಡೆತನದಿಂದಾಗಿ ಕಾಯಿದೆ ಜಾರಿಯಾಗದೆ ಸಿಕ್ಕಿದ ಸೌಲತ್ತುಗಳೂ ಇಲ್ಲದಂತಾಗಿರುವುದನ್ನು ತಿಳಿಯ ಹೇಳಿದರು

ಸಿ.ಐ.ಟಿ.ಯು. ಗೆ ವಿಜಯ

ಹರಿಹರದ ಹತ್ತಿರ ಇರುವ ಕುಮಾರಪಟ್ಟಣದಲ್ಲಿರುವ ಗ್ವಾಲಿಯರ್ ರೆಯಾನ್ ಗ್ರಾಸಿಮ್ ಡಿವಿಜನಿನಲ್ಲಿ ಇತ್ತೀಚೆಗೆ ನಡೆದ ಯೂನಿಯನ್ ಚುನಾವಣೆಯಲ್ಲಿ ಸಿ.ಐ.ಟಿ.ಯು. ನ 6 ಉಮೇದುವಾರರು ಅತಿ ಹೆಚ್ಚು ಮತ ಪಡೆದು ಎ.ಐ.ಟಿ.ಯು.ಸಿ. ಯವರನ್ನು ಸೋಲಿಸಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ವಿ ಜೆ ಕೆ ನಾಯರ್ ಅವರಿಗೆ ಶೇ 80ರಷ್ಟು ಮತಗಳು ಬಿದ್ದಿವೆ.

ಹರಿಹರ, ಹುಬ್ಬಳ್ಳಿ, ಸಕ್ಲೇಶಪುರದಲ್ಲಿರುವ ಹರಿಹರ ಕಿರ್ಲೋಸ್ಕರ್ ಯೂನಿಯನ್ ಚುನಾವಣೆಯಲ್ಲಿ ಎ ಐ ಟಿ ಯು ಸಿ ಯವರು ಎಲ್ಲ ಮತೀಯ ಪ್ರತಿಗಾಮಿ ಶಕ್ತಿಗಳೊಡನೆ ಸೇರಿಕೊಂಡು ಸ್ಪರ್ಧಿಸಿದರೂ ಕೂಡ ಸೋತುಹೋದರು. ವಿ ಜೆ ಕೆ ನಾಯರ್, ಎಂ ಎಸ್ ಆನಂದರಾವ್, ಸೂರ್ಯನಾರಾಯಣರಾವ್, ಎಂ ಬಿ ಶೆಟ್ಟಿ ಅವರು ಶಾಸಕ ಸಂಪಾದಿಸಿಯುವರನ್ನೊಳಗೊಂಡು ಎಲ್ಲ ಎ ಐ ಟಿ ಯು ಸಿ ಯವರನ್ನು ಸೋಲಿಸಿ ಗೌರವ ಸದಸ್ಯರಾಗಿ ಆರಿಸಿ ಬಂದಿದ್ದಾರೆ.

ಸಿ ಐ ಟಿ ಯು ಪ್ರತಿನಿಧಿಗಳನ್ನು ಬಹುಮತದಿಂದ ಆರಿಸಿದ್ದಕ್ಕಾಗಿ, ಸಿ ಐ ಟಿ ಯು ರಾಜ್ಯ ಸಮಿತಿ ಎಲ್ಲ ಕಾರ್ಯಕರ್ತರನ್ನೂ, ಹಿತೈಷಿಗಳನ್ನು ಅಭಿನಂದಿಸುತ್ತದೆ.

ವಿಧಾನ ಸಭೆಯಲ್ಲಿ ಕಾ|| ಟಿ. ಎಸ್. ಮಣಿ

(1ನೇ ಪುಟದಿಂದ)

ಸುಳ್ಳು ಕೇಸುಗಳು ಇವನ್ನೆಲ್ಲಾ ನಿಲ್ಲಿಸಬೇಕೆಂದು ಕೂಡಾ ಅವರು ಸರಕಾರವನ್ನು ಒತ್ತಾಯಿಸಿದರು ಅಲ್ಲದೆ ನಗರಗಳಲ್ಲಿ, ಪಟ್ಟಣಗಳಲ್ಲಿ ಬಾಡಿಗೆ ವಿಪರೀತವಾಗಿರುವುದರಿಂದ ಸರ್ಕಾರಿ ಕಾರ್ಮಿಕರಿಗೆ ಕ್ವಾರ್ಟರ್ಸುಗಳನ್ನ ಕೊಡಬೇಕೆಂದು, ಪವರ್‌ಲೂಮ್ ಕಾರ್ಮಿಕರನ್ನು ಫ್ಯಾಕ್ಟರಿ ಶಾಸನಕ್ಕೊಳಪಡಿಸಬೇಕೆಂದು, ಲಾಕೌಟು, ಲೇ ಆಫ್ ಹಾಗೂ ಕಾರ್ಖಾನೆ ಮುಚ್ಚುವಿಕೆ ತಡೆಯಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಮತ್ತು ನಿರುದ್ಯೋಗ ಸೃಷ್ಟಿಯಾಗದಂತೆ ನೋಡಿಕೊಳ್ಳಲು ಸಧ್ಯ ಇರುವ ಘಟಕಗಳಲ್ಲಿ ಕಂಪ್ಯೂಟರೀಕರಣ ತರಬಾರದೆಂದು ಒತ್ತಾಯಿಸುತ್ತಾ, ಕೆಲಸದ ಹಕ್ಕನ್ನು ಸಂವಿಧಾನದಲ್ಲಿ ಮೂಲಭೂತ ಹಕ್ಕಾಗಿಸಬೇಕೆಂದು, ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ ನೀಡಬೇಕೆಂದು ಅವರು ಹೇಳಿದರು.

ಕರ್ನಾಟಕ ಸರ್ಕಾರ 1981ರ ತೋಟಕಾರ್ಮಿಕರ ತಿದ್ದುಪಡಿ ಶಾಸನದ ನಿಯಮಗಳನ್ನು ಐದು ವರ್ಷಗಳಾದರೂ, ಕಾರ್ಮಿಕರ ಸಂಘಗಳು ಹಲವಾರು ಮನವಿ ಅರ್ಪಿಸಿದರೂ ಇನ್ನೂ ರೂಪಿಸಿಲ್ಲ, ತೋಟಮಾಲೀಕರ ಪ್ರಭಾವ ಈ ಸರ್ಕಾರದ ಮೇಲೆ ಯಾವ ರೀತಿಯದು ಎಂಬುದನ್ನು ಇದು ತೋರಿಸುತ್ತದೆ ಎಂದ ಕಾಂ. ಮಣಿ ತಕ್ಷಣವೇ ಇದನ್ನು ರೂಪಿಸಬೇಕೆಂದರು

ಕೆ.ಜಿ ಎಫ್.ನ ಉದ್ಯೋಗವಿನಿಮಯ ಕಚೇರಿಯನ್ನು ಮೇಲ್ದರ್ಜೆಗೇರಿಸಿ ಪೂರ್ಣಪ್ರಮಾಣದ ಕಚೇರಿಯನ್ನಾಗಿಸುವುದಾಗಿ ಹಾಗೂ ಅಲ್ಲೊಂದು ಹೆಣ್ಣು ಮಕ್ಕಳ ಕೈಗಾರಿಕಾ ತರಬೇತಿ [ಐ ಟಿ ಐ] ಶಾಲೆ ಆರಂಭಿಸುವುದಾಗಿ ಒಪ್ಪಿರುವ ಕಾರ್ಮಿಕ ಮಂತ್ರಿಗಳು ಇದನ್ನು ತಕ್ಷಣ ಕಾರ್ಯರೂಪಕ್ಕೆ ತರಬೇಕೆಂದೂ ಕಾ. ಮಣಿ ಕಾರ್ಮಿಕರ ಮಂತ್ರಿಗಳನ್ನು ಒತ್ತಾಯಿಸಿದರು.

ಸಿಂಧನೂರಿನಲ್ಲಿ ಕಾರ್ಮಿಕರ ಮೆರವಣಿಗೆ

ಸಿಂಧನೂರಿನ ಜನರಲ್ ವರ್ಕರ್ಸ್ ಯೂನಿಯನ್‌ನಿಂದ 9 2 1986 ಮತ್ತು 28.2. 86 ರಂದು ಕಾರ್ಮಿಕರ ಸಮಸ್ಯೆಗಳ ಬಗ್ಗೆ ವಿವರವಾಗಿ ಮನವಿ ಪತ್ರದ ಮುಖಾಂತರ ಕಾರ್ಮಿಕ ಅಧಿಕಾರಿಗಳಿಗೂ ಮತ್ತು ಕಾರ್ಮಿಕ ನಿರೀಕ್ಷಕರಿಗೂ ಕೇಳಿಕೊಂಡರೂ ಯಾವುದೇ ಸರಿಯಾದ ಉತ್ತರ ಬರದ ಕಾರಣ ದಿನಾಂಕ 4 3 1986ರಂದು ಅಧಿಕಾರಿಗಳ ಕಾರ್ಯ ನೀತಿಯನ್ನು ಪ್ರತಿಭಟಿಸಿ ಮುಖ್ಯ ರಸ್ತೆಗಳಿಂದ ಘೋಷಣೆ ಕೂಗುತ್ತ ಕಾರ್ಮಿಕ ನಿರೀಕ್ಷಕರ ಕಾರ್ಯಾಲಯಕ್ಕೆ ಕಾರ್ಮಿಕರು ಮೆರವಣಿಗೆ ತಲುಪಿದಾಗ ಕಾರ್ಮಿಕ ನಿರೀಕ್ಷಕರು ಈ ಕಾರ್ಯಕ್ರಮ ಗೊತ್ತಿದ್ದು ಗೈರು ಹಾಜರಿದ್ದುದ್ದನ್ನು ಸಂಘಟನೆಯು ಉಗ್ರವಾಗಿ ಖಂಡಿಸಿತು. ಕಾರ್ಮಿಕ ನಿರೀಕ್ಷಕರ ಕಾರ್ಯಾಲಯದಿಂದ ತಾಲೂಕು ಕಾರ್ಯಾಲಯಕ್ಕೆ ಮೆರವಣಿಗೆ ತಲುಪಿತು ಅಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು.

ನಿರುದ್ಯೋಗ ವಿರೋಧಿ ದಿನಾಚರಣೆಯ ಅಂಗವಾಗಿ 27-3-86 ರಂದು ಬೆಂಗಳೂರಿನಲ್ಲಿ ನಡೆಯಲಿರುವ

ಡಿ. ವೈ. ಎಫ್. ಐ. ರಾಜ್ಯ ಮಟ್ಟದ ರ್‍ಯಾಲಿಯನ್ನು ಯಶಸ್ವಿಗೊಳಿಸಿ

Printed & Published by P. Ramachandra Rao on behalf of the Communist Party of India (Mrxist)KarnatakaState Committee, K. V.Temple Street, Sultanpet, Bangalore-560053 Editorial and managerial office, L-56, K. V. TempleStreet, Sultanpet, B-53Phone : 75331
Editor P. Ramach andra Rao Managing Editor : N.K. Upadhyaya